ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 2
Pages - 20
₹ - 12
February - 2014

## ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಜನಪ್ರತಿನಿಧಿಗಳ ಮೆಚ್ಚುಗೆ

ಅವಲೋಕನ ಕಾರ್ಯಕ್ರಮ



ಸೌಹಾರ್ದ ಸಹಕಾರಿಗಳ ಸಂಖ್ಯೆ : 2692 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 567

ಅಧ್ಯಕ್ಷರ ನುಡಿ



"ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆಯೆ ಸರಕಾರ ಹಾಗೂ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವುದು ಎಲ್ಲರೂ ಅಪೇಕ್ಷಿಸುವುದು ಸಹಜ. ಈ ಬಗ್ಗೆ ಜನಪ್ರತಿನಿಧಿಗಳ ಗಮನ ಸೆಳೆಯುವ ಪ್ರಯತ್ನಮಾಡಿರುವುದು ಅತ್ಯಂತ ಉತ್ತಮವಾದ ಕಾರ್ಯ ಎಂದು ಹೇಳಿರುವುದು ನಮ್ಮ ಪ್ರಯತ್ನಕ್ಕೆ ಬೆನ್ನು ತಟ್ಟಿದಹಾಗೆ ಎಂದು ನಾವು ಭಾವಿಸಬಹುದಾಗಿದೆ."

# ಜನಪ್ರತಿನಿಧಿಗಳ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಕಾಳಜಿ ಪ್ರೋತ್ಸಾಹದಾಯಕ ಹಾಗೂ ಸ್ವಾಗತಾರ್ಹ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಹೆಜ್ಜೆಗಳ ಬಗ್ಗೆ ವಿವರಣೆ ಹಾಗೂ ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅಪೇಕ್ಷಿಸುವ ತಿದ್ದುಪಡಿಗಳ ಬಗ್ಗೆ ದಿನಾಂಕ : 23 ಜನೇವರಿ 2014 ರಂದು ನಗರದ ಎಟ್ರೀಯಾ ಹೋಟೇಲ್‌ನಲ್ಲಿ ಸಹಕಾರಿ ಕ್ಷೇತ್ರದ ಜೊತೆಗೆ ಗುರುತಿಸಿಕೊಂಡಿರುವ ಆಯ್ದ ವಿಧಾನ ಸಭಾ ಸದಸ್ಯರ ಹಾಗೂ ವಿಧಾನ ಪರಿಷತ್ ಸದಸ್ಯರ ಸಭೆಯಲ್ಲಿ ಭಾಗವಹಿಸಿದವರಿಗೆ ಪ್ರಾರಂಭದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ 13 ವರ್ಷಗಳ ಸಾಧನೆಯ ಬಗ್ಗೆ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು. ನಂತರ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಹಾಗೂ ಸಂಯುಕ್ತ ಸಹಕಾರಿ ಚಟುವಟಿಕೆಗಳನ್ನು ಪಿಪಿಟಿ ಮೂಲಕ ವಿವರಿಸಲಾಯಿತು. ಭಾಗವಹಿಸಿದ ಜನಪ್ರತಿನಿಧಿಗಳು ಅತ್ಯಂತ ಸಂಯಮದಿಂದ, ತಾಳ್ಮೆಯಿಂದ ಈ ಸಾಧನೆಗಳನ್ನು ಅಧ್ಯಯನ ಮಾಡಿರುವುದು ಗಮನಾರ್ಹ.

ನಂತರದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕನುಗುಣವಾಗಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಸರಕಾರ ರಚಿಸಿದೆ. ಅದರಂತೆ ಕಾರ್ಯನಿರ್ವಹಿಸುತ್ತ ಬಂದಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಪೂರ್ಣ ಬೆಂಬಲ ನೀಡುತ್ತಿದೆ. ಆದರೆ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಮಾಡುವಾಗ ಕೆಲವು ವ್ಯತ್ಯಾಸಗಳಾಗಿವೆ. ಈಗ ಮತ್ತೆ ಕೆಲವು ತಿದ್ದುಪಡಿಗಳನ್ನು ಸರಕಾರ ಸೂಚಿಸುವ ಸಮಯದಲ್ಲಿ ಜನಪ್ರತಿನಿಧಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಕ್ಕೆ ಸ್ಪಂದಿಸಬೇಕು ಎಂದು ಸಲ್ಲಿಸಿದ ವಿನಂತಿಯನ್ನು ಜನಪ್ರತಿನಿಧಿಗಳು ಸಂತೋಷದಿಂದ ಒಪ್ಪಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸಿರುವುದು ಸ್ವಾಗತಾರ್ಹ.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಹೆಚ್.ಕೆ. ಪಾಟೀಲರವರು ರಾಜ್ಯದ ಸೌಹಾರ್ದ ಸಹಕಾರಿಗಳು ಪ್ರಗತಿ ತೃಪ್ತಿದಾಯಕವಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಸರಕಾರ ಹಾಗೂ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವುದು ಎಲ್ಲರೂ ಅಪೇಕ್ಷಿಸುವುದು ಸಹಜ. ಈ ಬಗ್ಗೆ ಜನಪ್ರತಿನಿಧಿಗಳ ಗಮನ ಸೆಳೆಯುವ ಪ್ರಯತ್ನಮಾಡಿರುವುದು ಅತ್ಯಂತ ಉತ್ತಮವಾದ ಕಾರ್ಯ ಎಂದು ಹೇಳಿರುವುದು ನಮ್ಮ ಪ್ರಯತ್ನಕ್ಕೆ ಬೆನ್ನು ತಟ್ಟಿದಹಾಗೆ ಎಂದು ನಾವು ಭಾವಿಸಬಹುದಾಗಿದೆ.

ಇದರಂತೆ ರಾಜ್ಯದ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳು ತಮ್ಮ ಕ್ಷೇತ್ರದ ಶಾಸಕರ ಹಾಗೂ ವ್ಯಾಪ್ತಿಯಲ್ಲಿ ಬರುವ ವಿಧಾನ ಪರಿಷತ್ ಸದಸ್ಯರ ಹಾಗೂ ಎಲ್ಲ ಜನಪ್ರತಿನಿಧಿಗಳ ಗಮನ ಸೇಳೆಯುವ ಹಾಗೆ ಪಾರದರ್ಶಕವಾಗಿ ಗುಣಾತ್ಮಕವಾಗಿ ತಮ್ಮ ಕಾರ್ಯನಿರ್ವಹಣೆ ಇರಬೇಕು ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ಗುರುನಾಥ ಜ್ಯಾಂತಿಕರ**
ಅಧ್ಯಕ್ಷರು

# ಸಂಪಾದಕೀಯ



## ಭರವಸೆ, ಆಶ್ವಾಸನೆಗಳಿಗೆ ಸ್ಪಂದಿಸುವ ಸಮಯ ಸನ್ನಿಹಿತ

**97ನೇ** ಸಂವಿಧಾನ ತಿದ್ದುಪಡಿಗಳಿಗನುಸಾರವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಮಾಡುವ ಸಮಯದಲ್ಲಿ ಕೆಲವು ವ್ಯತ್ಯಾಸಗಳಾಗಿ ಸೌಹಾರ್ದ ಸಹಕಾರಿಗಳ ಸ್ವತಂತ್ರ ಕಾರ್ಯನಿರ್ವಹಣೆಯಲ್ಲಿ ತೊಡಕಾಗಿವೆ. ಈ ವಿಷಯಗಳನ್ನು ಮಾನ್ಯ ಸಹಕಾರ ಸಚಿವರ ಗಮನಕ್ಕೆ, ಸೌಹಾರ್ದ ಸಹಕಾರಿ ಕ್ಷೇತ್ರದ ಜೊತೆಗೆ ಗುರುತಿಸಿಕೊಂಡಿರುವ ಕೆಲವು ಸಚಿವರು, ಶಾಸಕರು, ವಿಧಾನ ಪರಿಷತ ಸದಸ್ಯರುಗಳ ಹಾಗೂ ಸಹಕಾರಿ ಇಲಾಖೆಯ ಕಾರ್ಯದರ್ಶಿಯವರ ನಿಬಂಧಕರ ಗಮನಕ್ಕೆ ತರುವ ಪ್ರಯತ್ನವನ್ನು ಸಂಯುಕ್ತ ಸಹಕಾರಿಯು ಹಲವಾರು ಬಾರಿ ಮಾಡುತ್ತಲೆ ಬಂದಿದೆ. ಸಹಕಾರಿ ಇಲಾಖೆಯವರು ಸಹ ಸೌಹಾರ್ದ ಸಹಕಾರಿ ಕಾನೂನಿಗೆ ಆಗಬೇಕಿರುವ ತಿದ್ದುಪಡಿಗಳ ಬಗ್ಗೆ ಅನೇಕ ಬಾರಿ ಚರ್ಚಿಸಿದ್ದಾರೆ. ಹೀಗಾಗಿ ಸರಕಾರ ಈ ಬಾರಿ ಸೌಹಾರ್ದ ಸಹಕಾರಿಗಳಿಗೆ ನೀಡಿರುವ ಎಲ್ಲ ಭರವಸೆ ಹಾಗೂ ಆಶ್ವಾಸನೆಗಳಿಗೆ ಸ್ಪಂದಿಸುವ ಸಮಯ ಸನ್ನಿಹಿತವಾಗಿದೆ ಎಂದು ತಿಳಿಯಬಹುದಾಗಿದೆ.

ಕಳೆದ ವಿಧಾನ ಸಭಾ ಅಧಿವೇಶನದ ಸಂದರ್ಭದಲ್ಲಿ ಈ ಬಗ್ಗೆ ತಿದ್ದುಪಡಿಗಳು ಚರ್ಚೆಗೆ ಬರಬಹುದು ಎಂದು ಆಶಿಸಲಾಗಿತ್ತು. ಈ ಬಗ್ಗೆ ಪ್ರಯತ್ನವನ್ನು ಸಂಯುಕ್ತ ಸಹಕಾರಿಯ ವತಿಯಿಂದ ಮಾಡಲಾಗಿತ್ತು. ಕಾರಣಾಂತರದಿಂದ ಈ ತಿದ್ದಪಡಿಗಳು ಚರ್ಚೆಗೆ ಬರಲಿಲ್ಲ. ನಿರಾಶರಾಗುವ ಅವಶ್ಯಕತೆಯಿಲ್ಲ. ತಿದ್ದುಪಡಿ ಸಾಕಾರಗೊಳ್ಳುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ತನ್ನ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಿದೆ ಎಂಬ ಬಗ್ಗೆ ಸೌಹಾರ್ದ ಸಹಕಾರಿಗಳಿಗೆ ವಿಶ್ವಾಸವಿರಲಿ. ಮುಂಬರುವ ಅಧಿವೇಶನದಲ್ಲಿ ಮಂಡನೆಯಾಗಬಹುದು ಎಂದು ನಿರೀಕ್ಷಿಸೋಣ. ನಿಮ್ಮ ಸಲಹೆ ಸಹಕಾರಗಳು ನಿರಂತರವಾಗಿರಲಿ.

ಸರಕಾರ ತನ್ನ ಕೆಲಸ ತಾನು ಮಾಡುತ್ತದೆ. ನಾವುಗಳು ನಮ್ಮ ಕೆಲಸ ಮಾಡೋಣ. ಎಲ್ಲವೂ ಒಳ್ಳೆಯದಾಗುತ್ತದೆ. ಈ ಭರವಸೆ ಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳು ನಮ್ಮ ಸಹಕಾರಿಯ ಉಪನಿಬಂಧನೆಗಳಿಗನು ಸಾರವಾಗಿ ಸೌಹಾರ್ದ ಸಹಕಾರಿ ಕಾಯ್ದೆ ಹಾಗು ನಿಯಮಗಳಿಗಳ ವ್ಯಾಪ್ತಿಗೆ ಒಳಪಟ್ಟು ಉತ್ತಮವಾಗಿ ಕಾರ್ಯನಿರ್ವಹಿಸುವ ಪ್ರಕ್ರೀಯೆಯನ್ನು ಮುಂದುವರೆಸೋಣ. ಸದಸ್ಯರಿಗೆ ಒದಗಿಸಬಹುದಾದ ಹೆಚ್ಚುವರಿ ಸೌಲಭ್ಯಗಳ ಬಗ್ಗೆ ಚಿಂತಿಸೋಣ. ಕಾರ್ಯಕ್ರಮ ಹಾಕಿಕೊಳ್ಳೋಣ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಕಾರ್ಯನಿರತರಾಗೋಣ. ಬೇರೆಯವರಿಗೆ ಮಾದರಿಯಾಗಿರೋಣ ಸೌಹಾರ್ದ ಸಹಕಾರಿ ಕ್ಷೇತ್ರದ ಗರಿಮೆಯನ್ನು ಹೆಚ್ಚಿಸೋಣ. ■

### ಒಳ ಪುಟಗಳಲ್ಲಿ...

ಸೌಹಾರ್ದ ಸಹಕಾರಿ ಕಾಯ್ದೆ ಆಶಯದಂತೆ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿಗೆ ಸಂಪೂರ್ಣ ಬೆಂಬಲ ........................ 4

ಸ್ವಸ್ಥ ಸಮಾಜ ನಿರ್ಮಾಣಕ್ಕಾಗಿ ವಿವೇಕಾನಂದರ ಚಿಂತನೆಗಳು ಪ್ರಸ್ತುತ – ಸ್ವಾಮಿ ವಿನಯಾನಂದ ಸರಸ್ವತಿ ಮಹಾರಾಜ್ .................... 7

ಪರಿಣಿತಿ ಸಾಧನೆಗೆ ನಿರಂತರ ಪರಿಶ್ರಮ ಅಗತ್ಯ – ಎಸ್.ಪಿ.ನಾಯಕ ..... 8

"ಸಹಕಾರಿ ತತ್ವಗಳ ಅನುಷ್ಠಾನವೇ ಸಹಕಾರಿಗಳ ಯಶಸ್ವಿಗೆ ಕಾರಣ" ...... 9

ರಾಜ್ಯದ ಸೌಹಾರ್ದ ಸಹಕಾರ ಸಂಸ್ಥೆಗಳಿಂದ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನ ಆಚರಣೆ ...................................... 10

2014 ಫೆಬ್ರವರಿ ಮಾಹೆಯಲ್ಲಿ ಅಧ್ಯಕ್ಷರ ಪ್ರವಾಸ ಕಾರ್ಯಕ್ರಮ ........... 13

ಸಂಭ್ರಮದ 65ನೇ ಗಣರಾಜ್ಯೋತ್ಸವ ದಿನಾಚರಣೆ .................. 14

ಸಂಯುಕ್ತ ಸಹಕಾರಿಯ ಕಛೇರಿಗೆ ಸಹಕಾರಿ ಇಲಾಖೆಯ ಕಾರ್ಯದರ್ಶಿ ಡಾ.ಸೋಮಶೇಖರ ಭೇಟಿ .................................................. 15

ರಾಷ್ಟ್ರೀಯ ಸಹಕಾರಿ ಸಮಾಚಾರಗಳು ................................ 16

ತೆರಿಗೆ ಮತ್ತು ಕಾನೂನು – ಮಾಹಿತಿ ಮಾಲಿಕೆ – 2 ............... 17

ಸಹಕಾರ ಸಂಸ್ಥೆಗಳ ಸಾಮರ್ಥ್ಯ ವೃದ್ಧಿಗೆ 'ಸಂಪೂರ್ಣ ಗುಣಮಟ್ಟದ ಆಡಳಿತ' ........................................................................ 18

ಬ್ಯಾಂಕಿಂಗ್ ಕ್ಷೇತ್ರದ ಜ್ಞಾನ ವಿಸ್ತಾರಕ್ಕಾಗಿ ಒಂದು ವೆಬ್‌ತಾಣ ..... 19

ಕರ್ನಾಟಕ ಸೌಹಾರ್ದ ಸಹಕಾರಿ 1997 ಕಾಯ್ದೆ ಪುಸ್ತಕ .......... 20

# ಸೌಹಾರ್ದ ಸಹಕಾರಿ ಕಾಯ್ದೆ ಆಶಯದಂತೆ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿಗೆ ಸಂಪೂರ್ಣ ಬೆಂಬಲ

## ಸೌಹಾರ್ದ ಸಹಕಾರಿ ಚಳುವಳಿ ಬೆಳವಣಿಗೆಯ ಅವಲೋಕನ ಕಾರ್ಯಕ್ರಮದಲ್ಲಿ ಒಮ್ಮತದ ಅಭಿಪ್ರಾಯ

## ಸಹಕಾರಿ ಸಂಸ್ಥೆಗಳ ಸಾಧನೆಗಳನ್ನು ಗೌರವಿಸಿ, ಪ್ರೋತ್ಸಾಹಿಸಿ – ಶ್ರೀ ಹೆಚ್.ಕೆ.ಪಾಟೀಲ್

ಬೆಂಗಳೂರು. ದಿನಾಂಕ 23 ಜನೆವರಿ: ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ರಾಜ್ಯದಲ್ಲಿ ನಗರದ ಪ್ಯಾಲೇಸ ರಸ್ತೆಯ ಏಟ್ರಿಯ ಹೋಟೆಲ್‌ನಲ್ಲಿ ವಿಧಾನ ಪರಿಷತ ಸದಸ್ಯರ ಹಾಗೂ ವಿಧಾನ ಸಭಾ ಸದಸ್ಯರ ಉಪಸ್ಥಿತಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 13 ವರ್ಷಗಳು ಕಳೆದ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಯ ಹೆಜ್ಜೆಗಳ ಅವಲೋಕನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಹೆಚ್.ಕೆ.ಪಾಟೀಲರವರು ಉದ್ಘಾಟಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಬೆಳವಣಿಗೆ ಉತ್ತಮವಾಗಿದೆ. ಉತ್ತಮ ಕಾರ್ಯಚಟುವಟಿಕೆಗಳು ನಡೆಯುತ್ತಿವೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಸಹಕಾರವನ್ನು ಸರಕಾರ ನೀಡುತ್ತದೆ ಎಂದು ಹೇಳಿದರು. ಸರಕಾರಗಳು ಮಾಧ್ಯಮಗಳು ಕಂಪನಿಗಳಿಗೆ ಮಣೆಹಾಕುವುದನ್ನು ನಿಲ್ಲಿಸಿ ಸಹಕಾರಿ ವ್ಯವಸ್ಥೆಗೆ ಪ್ರೋತ್ಸಾಹಿಸುವ, ಸಹಕಾರದ ಸಾಧನೆಗಳನ್ನು ಗೌರವಿಸಿ ಬೆಂಬಲಿಸುವ ಪ್ರವೃತ್ತಿಯನ್ನು ರೂಢಿಸಿಕೊಳ್ಳವುದು ಅಗತ್ಯ ಎಂದು ತಿಳಿಸಿದರು.

ನಂತರ ಸೌಹಾರ್ದ ಸಹಕಾರಿ ಚಳುವಳಿ ನಡೆದುಬಂದ ದಾರಿಯ ಬಗ್ಗೆ ಸಾಧನೆಗಳ ಬಗ್ಗೆ ಪಿ.ಪಿ.ಟಿ. ಮೂಲಕ ವಿವರಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ತಿಳಿಸಿದರು. ದೇಶದಲ್ಲಿ ಪ್ರಪ್ರಥಮವಾಗಿ ಛಾಪಾಕಾಗದ (ಇ–ಸ್ಟಾಂಪಿಂಗ್) ಮಾರಾಟ ಪದ್ಧತಿ



ಪ್ರಾರಂಭಿಸಿದ ಕೀರ್ತಿ ಸೌಹಾರ್ದ ಸಹಕಾರಿಗಳಿಗೆ ಸಲ್ಲುತ್ತದೆ. ಪ್ರತಿ ದಿನದ ಅಂದಾಜು 1 ಕೋಟಿ ರೂ.ಗಳಿಗಿಂತ ಹೆಚ್ಚು ಮೊತ್ತವನ್ನು ರಾಜ್ಯದ ರಾಜಸ್ವಕ್ಕೆ ಸಂಗ್ರಹಿತವಾಗುತ್ತದೆ. ನಂತರ ಉಪಸ್ಥಿತರಿದ್ದ ಶಾಸಕರು ವಿಧಾನ ಪರಿಷತ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಕಾರ್ಯನಿರ್ವಹಿಸಲು ಸೌಹಾರ್ದ ಸಹಕಾರಿಗಳು ಬದ್ಧರಾಗಿದ್ದಾರೆ. ಅವರುಗಳಿಗೆ ಅಗತ್ಯವಾದ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿಯಲ್ಲಿ ಅಗತ್ಯ ಬೆಂಬಲ ನೀಡುವುದಾಗಿ ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರು ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಮುಖ ತಿದ್ದುಪಡಿಗಳನ್ನು ಚರ್ಚಿಸುವುದಕ್ಕಾಗಿ ವ್ಯವಸ್ಥೆ ಮಾಡಿರುವ ಸಭೆಗೆ ಆಗಮಿಸಿದ ಎಲ್ಲ ಗಣ್ಯರನ್ನು ಸ್ವಾಗತ ಮಾಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿ ರಾಜ್ಯದಲ್ಲಿ ಇದುವರೆಗೆ 2650ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಅತ್ಯಂತ ವಿಭಿನ್ನ ರೀತಿಯ ಸೌಹಾರ್ದ ಸಹಕಾರಿಗಳಿವೆ. ಕೇವಲ ಒಂದು ದಶಕದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿವೆ ಎಂದು ತಿಳಿಸುತ್ತ ರಾಜ್ಯದ ವಿಶೇಷವಾಗಿ ಸಹಕಾರಿ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಜೊತೆಗೆ ಗುರುತಿಸಿಕೊಂಡಿರುವ ಆಮಂತ್ರಿತ ಶಾಸಕರು ಹಾಗೂ ವಿಧಾನ ಪರಿಷತ ಸದಸ್ಯರುಗಳ ಅವಗಾಹನೆಗಾಗಿ ಈ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಹೆಜ್ಜೆಗಳನ್ನು ಪರಿಚಯಿಸುವುದಕ್ಕಾಗಿ ಈ ಕಾರ್ಯಕ್ರಮ ಎಂದು ತಿಳಿಸಿದರು.



ನಂತರ ನಡೆದ ಚರ್ಚೆಯಲ್ಲಿ ವಿಶೇಷವಾಗಿ 97ನೇ ಸಂವಿಧಾನ ತಿದ್ದುಪಡಿ ನಂತರ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡುವಾಗ ಕೆಲವು ವ್ಯತ್ಯಾಸಗಳಾಗಿವೆ ವಿಶೇಷವಾಗಿ ಸಹ ಸದಸ್ಯತ್ವ ಕೈ ಬಿಡಲಾಗಿದೆ. ನಾಮ ಮಾತ್ರ ಸದಸ್ಯತ್ವ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ. ಸಹಕಾರಿ ಸಂಸ್ಥೆಗಳ ವಾರ್ಷಿಕ ಮಹಾ ಸಭೆಯನ್ನು ನಡೆಸುವಾಗ ಒಟ್ಟು ಸದಸ್ಯರ ಪೈಕಿ 20% ಕಡ್ಡಾಯವಾಗಿ ಹಾಜರಾತಿ ಇರಬೇಕು ಎಂಬುದಾಗಿದೆ ಹೀಗೆ ಇನ್ನೂ ಹಲವು ಅಂಶಗಳಿವೆ. ಇವೆಲ್ಲವುಗಳು ಸೌಹಾರ್ದ ಸಹಕಾರಿ ಮೂಲ ಕಾಯ್ದೆಯ ಆಶಯಗಳಿಗೆ ಅನುಗುಣವಾಗಿಲ್ಲ. ವಾಸ್ತವಿಕತೆಗೆ ಪೂರಕವಾಗಿಲ್ಲ. ಇವುಗಳನ್ನು ಪುನಃ ತಿದ್ದುಪಡಿ ಮಾಡುವುದು ಅವಶ್ಯಕ ಎಂದು ಅಭಿಪ್ರಾಯ ವ್ಯಕ್ತವಾಯಿತು. ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಕಾನೂನಿನ ಆಶಯ ಹಾಗೂ ವಿಷಯಗಳ ಬಗ್ಗೆ ವಿವರಣೆ ನೀಡಿದರು. ಸಹಕಾರಿ ಇಲಾಖೆಯ ಕಾನೂನು ಕೋಶ ವಿಭಾಗದ ಜಂಟಿ ನಿಬಂಧಕ ಶ್ರೀ ಎನ್.ಎಸ್. ಅರುಣಕುಮಾರ ರವರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿ ಅನೇಕ ನಿರ್ದೇಶಕರುಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

**ಈ ಕೆಳಕಂಡ ವಿಷಯಗಳ ಬಗ್ಗೆ ಸೂಕ್ತ ಕ್ರಮವಿಡುವಂತೆ ಸರಕಾರದ ಗಮನಕ್ಕೆ ತರುವುದೆಂದು ತಿರ್ಮಾನಿಸಲಾಯಿತು :**

1. ಲೆಕ್ಕಪರಿಶೋಧಕರ ಪಟ್ಟಿಯನ್ನು ತಯಾರಿಸಲು ಸಂಯುಕ್ತ ಸಹಕಾರಿಯನ್ನು ಪ್ರಾಧಿಕೃತಗೊಳಿಸುವಂತೆ ಅಧಿನಿಯಮದಲ್ಲಿ ಸೂಕ್ತ ತಿದ್ದುಪಡಿ ಅಗತ್ಯವಿದೆ.
2. ಸಹ ಸದಸ್ಯತ್ವವನ್ನು ಸೌಹಾರ್ದ ಸಹಕಾರಿ ಅಧಿನಿಯಮದಲ್ಲಿ ಅಳವಡಿಸುವುದು ಅಗತ್ಯವಾಗಿದೆ.
3. ನಾಮಮಾತ್ರ ಸದಸ್ಯರನ್ನು ಸೇರಿಸಿಕೊಳ್ಳಲು ವಿಧಿಸಿರುವ ಷರತ್ತನ್ನು ತೆಗೆದುಹಾಕುವುದು.
4. ಸಮಾಪನೆಗೆ ರಿಜಿಸ್ಟ್ರಾರರಿಗೆ ಶಿಫಾರಸು ಮಾಡುವ ಪ್ರಾವಧಾನ ಸಂಯುಕ್ತ ಸಹಕಾರಿಗೆ ಅವಶ್ಯಕ.
5. ಯಾವುದೇ ಸಹಕಾರಿಯು ಆರ್ಥಿಕವಾಗಿ ಅಭದ್ರವಾಗುವ ಸಂಭವ ವಿದ್ದರೆ ಹಾಗೂ ಅದನ್ನು ನೋಂದಣಿ ಮಾಡುವುದರಿಂದ ಸಹಕಾರಿ ಚಳುವಳಿಯ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂದು ಕಂಡುಬಂದರೆ ಅದನ್ನು ನೋಂದಣಿ ಮಾಡತಕ್ಕದ್ದಲ್ಲ ಎಂದಿರುವ ಅಂಶವನ್ನು ಕೈಬಿಡುವುದು.
6. ಸಾರ್ವಜನಿಕರಿಗೆ / ಖಾಸಗಿ ವ್ಯಕ್ತಿಗಳಿಗೆ ಲಭ್ಯವಾಗುವ ಸರ್ಕಾರದ ಯೋಜನೆ / ಪ್ರಕಲ್ಪದ ಅನುದಾನ / ಸಹಾಯಧನ / ಸಬ್ಸಿಡಿ ಅಥವಾ ಇನ್ನಾವುದೇ ರೂಪದ ಅನುದಾನಗಳನ್ನು ಪಡೆಯಲು ಅವಕಾಶ ಅಗತ್ಯ.
7. ಕಾಯ್ದೆಯ ಪರಿಮಿತಿಯಲ್ಲಿ ಆದೇಶಗಳನ್ನು, ನಿರ್ದೇಶನಗಳನ್ನು ನೀಡಲು ಕೂಡ ಪ್ರಾವಧಾನ ಮಾಡಬೇಕು ಮತ್ತು ಸಂಯುಕ್ತ ಸಹಕಾರಿಯು ಮಾಡಿದ ಯಾವುದೇ ಆದೇಶ, ಮಾರ್ಗಸೂಚಿ, ಸುತ್ತೋಲೆ ಹಾಗೂ ನಿರ್ದೇಶನಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರದಿದ್ದಲ್ಲಿ ಕೂಡ ಸಹಕಾರಿಯ ಎಲ್ಲಾ ನಿರ್ದೇಶಕರು ಅನರ್ಹರಾಗುತ್ತಾರೆಂದು ಪ್ರಾವಧಾನ ಮಾಡಬೇಕು.
8. ಸಂಯುಕ್ತ ಸಹಕಾರಿಯು ಒಂದು ಸಹಕಾರಿಯ ಸಾಮಾನ್ಯ ಸಭೆಯನ್ನು ಕರೆಯುವಂತೆ ನಿರ್ದೇಶನ ನೀಡಲು ಅವಕಾಶ ಕಲ್ಪಿಸಬೇಕು.
9. ಪದಾವಧಿ ಮುಗಿದ ನಂತರವೂ ಯಾವುದೇ ಕಾರಣದಿಂದ ಚುನಾವಣೆ ನಡೆಯದಿದ್ದಲ್ಲಿ, ವಿಶೇಷಾಧಿಕಾರಿಗಳನ್ನು ನೇಮಕ ಮಾಡಲು ಅವಕಾಶ ಕಲ್ಪಿಸಬೇಕು. ಏಕೆಂದರೆ ಪದಾವಧಿ ಮುಗಿದಿರುವುದರಿಂದ ನಿರ್ದೇಶಕರು ಪದತ್ಯಾಗ ಮಾಡಿರುತ್ತಾರೆ. ನೂತನ ನಿರ್ದೇಶಕರ





ಆಯ್ಕೆಯಾಗಿರುವುದಿಲ್ಲ ಹಾಗೂ ಮಂಡಲಿಯ ಎಲ್ಲಾ ಸ್ಥಾನಗಳು ಖಾಲಿಯಾದಲ್ಲಿ, ಉಳಿದ ಅವಧಿಗೆ ಚುನಾವಣೆ ಬದಲು ಪೂರ್ಣ ಅವಧಿಗೆ ಚುನಾವಣೆ ನಡೆಸುವಂತೆ ಪ್ರಾವಧಾನ ಕಲ್ಪಿಸುವುದು ಅಗತ್ಯ.

10. ನೋಂದಣಿಯಾಗಿದೆಯೆಂದು ಭಾವಿಸಿದ ಸಹಕಾರಿಯು ನಿಕಟ ಮೇಲಧಿಕಾರಿಗೆ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಮತ್ತು ನಿಕಟ ಮೇಲಧಿಕಾರಿಯು ಅಂತಹ ಮನವಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ನೋಂದಣಿ ಪ್ರಮಾಣ ಪತ್ರವನ್ನು ನೀಡಬೇಕು ಎನ್ನುವ ಪ್ರಾವಧಾನವನ್ನು ಸೇರಿಸಬೇಕು.

11. ಸಹಾಯಕ ನಿಬಂಧಕರು, ಉಪ ನಿಬಂಧಕರು, ಜಂಟಿ ನಿಬಂಧಕರ ತೀರ್ಮಾನ, ಐತೀರ್ಪು ಅಥವಾ ಆದೇಶದ ವಿರುದ್ದ ಕರ್ನಾಟಕ ಅಪೀಲು ನ್ಯಾಯಾಧೀಕರಣಕ್ಕೆ ತೀರ್ಮಾನ, ಐತೀರ್ಪು ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು ಎಂಬ ಕಾಲ ಮಿತಿಯ ಪ್ರಾವಧಾನವಿರುವುದು ಉತ್ತಮ. ವಿಧಾನ ಪರಿಷತ ಸದಸ್ಯ ಹಾಗು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಅರುಣ ಶಹಾಪುರ ವಂದನಾರ್ಪಣೆ ಸಲ್ಲಿಸಿದರು.



## ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು

1. ಶ್ರೀ ಹೆಚ್.ಕೆ.ಪಾಟೀಲ್ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
2. ಶ್ರೀ ಜಿ.ಟಿ.ದೇವೇಗೌಡ, ಶಾಸಕರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ.
3. ಶ್ರೀ ಎಸ್.ಟಿ.ಸೋಮಶೇಖರ, ಶಾಸಕರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳ
4. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರು.
5. ಶ್ರೀ ಬಸವರಾಜ ಬೊಮ್ಮಾಯಿ, ಶಾಸಕರು.
6. ಶ್ರೀ ಸಿ.ಟಿ. ರವಿ, ಶಾಸಕರು.
7. ಶ್ರೀ ವೈ.ಎಸ್.ವಿ. ದತ್ತ, ಶಾಸಕರು,
8. ಶ್ರೀ ವಿ. ಸುನೀಲಕುಮಾರ, ಶಾಸಕರು
9. ಶ್ರೀ ಡಿ.ಎನ್.ಜೀವರಾಜ, ಶಾಸಕರು
10. ಶ್ರೀ ಕೆ.ಜಿ.ಭೂಪಯ್ಯ, ಶಾಸಕರು.
11. ಶ್ರೀ ಬಿ.ಆರ್.ಪಾಟೀಲ್, ಶಾಸಕರು.
12. ಶ್ರೀ ಹಂಪನಗೌಡ ಬಾದರ್ಲಿ, ಶಾಸಕರು.
13. ಶ್ರೀ ಪ್ರತಾಪಗೌಡ ಪಾಟೀಲ್, ಶಾಸಕರು.
14. ಡಾ. ಅಜಯಸಿಂಗ್, ಶಾಸಕರು.
15. ಶ್ರೀ ಎಮ್.ತಹಶೀಲದಾರ್, ಶಾಸಕರು.
16. ಶ್ರೀ ಅಶೋಕ ಖೇಣಿ, ಶಾಸಕರು.
17. ಡಾ.ವಿ.ಐ.ಪಾಟೀಲ್, ಶಾಸಕರು.
18. ಶ್ರೀ ಬೈರತಿ ಸುರೇಶ, ವಿಧಾನ ಪರಿಷತ ಸದಸ್ಯರು.
19. ಶ್ರೀ ಅರುಣ ಶಹಾಪುರ, ವಿಧಾನ ಪರಿಷತ್ ಸದಸ್ಯರು.
20. ಶ್ರೀ ಎಸ್.ಎಲ್.ಘೋಟ್ನೇಕರ, ವಿಧಾನ ಪರಿಷತ ಸದಸ್ಯರು.
21. ಶ್ರೀ ಅಲ್ಲಮಪ್ರಭು ಪಾಟೀಲ್, ಶಾಸಕರು.
22. ಶ್ರೀ ಹಾಲಪ್ಪಾಚಾರ್, ವಿಧಾನ ಪರಿಷತ ಸದಸ್ಯರು ಹಾಗೂ ಅಧ್ಯಕ್ಷರು ಸಹಕಾರ ಮಾರಾಟ ಮಹಾಮಂಡಳ.
23. ಶ್ರೀ ಗಣೇಶ ಕಾರ್ಣಿಕ, ವಿಧಾನ ಪರಿಷತ ಸದಸ್ಯರು.
24. ಶ್ರೀ ಗೋ. ಮಧುಸೂಧನ, ವಿಧಾನ ಪರಿಷತ ಸದಸ್ಯರು
25. ಶ್ರೀ ಮೋನಪ್ಪ ಭಂಡಾರಿ, ವಿಧಾನ ಪರಿಷತ ಸದಸ್ಯರು.
26. ಶ್ರೀ ವೀರಕುಮಾರ ಪಾಟೀಲ್, ವಿಧಾನ ಪರಿಷತ ಸದಸ್ಯರು.





# ಸ್ವಸ್ಥ ಸಮಾಜ ನಿರ್ಮಾಣಕ್ಕಾಗಿ ವಿವೇಕಾನಂದರ ಚಿಂತನೆಗಳು ಪ್ರಸ್ತುತ – ಸ್ವಾಮಿ ವಿನಯಾನಂದ ಸರಸ್ವತಿ ಮಹಾರಾಜ್

## ಮಯೂರ ಸೌಹಾರ್ದ ಸಹಕಾರಿಯ ಶಿವಮೊಗ್ಗ ಶಾಖೆಯ ವಾರ್ಷಿಕ ಸಭೆ

**ಶಿವಮೊಗ್ಗ :** ನಾವು ನಿಜವಾದ ಸುಖವನ್ನು ಅನುಭವಿಸಬೇಕಾದರೆ ಚಾಣುಕ್ಯನ ಅರ್ಥಶಾಸ್ತ್ರವನ್ನು ಓದಬೇಕು ಎಂದು ಶಿವಮೊಗ್ಗದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮೀಜಿಗಳಾದ ಪೂಜ್ಯ ವಿನಯಾನಂದ ಸರಸ್ವತಿ ಮಹಾರಾಜ ತಿಳಿಸಿದರು.

ಶಿವಮೊಗ್ಗ ನಗರದ ರವೀಂದ್ರ ನಗರದಲ್ಲಿರುವ ಶ್ರೀ ಪ್ರಸನ್ನ ಗಣಪತಿ (ಬಲಮುರಿ) ದೇವಸ್ಥಾನದಲ್ಲಿ ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸಂಸ್ಥೆಯ ಶಿವಮೊಗ್ಗ ಶಾಖೆಯ ವಾರ್ಷಿಕ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಸ್ವಾಮಿ ವಿವೇಕಾನಂದರ ಚಿಂತನೆ ಎಂಬ ವಿಷಯದ ಬಗ್ಗೆ ಮಾತನಾಡುತ್ತ ಚಾಣುಕ್ಯನ ಅರ್ಥಶಾಸ್ತ್ರದಲ್ಲಿ ಸ್ವಸ್ಥ ಸಮಾಜದ ನಿರ್ಮಾಣದ ಬಗ್ಗೆ ಕೊಟ್ಟಿರುವ ಮೂಲ ಮಂತ್ರ ಎಂದರೆ ಸುಖದ ಮೂಲ ಧರ್ಮ, ಧರ್ಮದ ಮೂಲ ಹಣ, ಹಣದ ಮೂಲ ರಾಜ್ಯಾಂಗ, ರಾಜ್ಯಾಂಗದ ಮೂಲ ರಾಜ, ಅಂತಹ ರಾಜನು ತನ್ನ ಇಂದ್ರಿಯ ನಿಗ್ರಹದಿಂದ ರಾಜ್ಯಭಾರವನ್ನು ಉತ್ತಮವಾಗಿ ಮಾಡುತ್ತಾನೆ ಇಲ್ಲವಾದರೆ ತನ್ನ ಚಾರಿತ್ರ್ಯ ಕುಸಿತದಿಂದ ರೂಪಾಯಿ ಮೌಲ್ಯವು ಕುಸಿಯಲು ಕಾರಣನಾಗುತ್ತಾನೆ.

ಸೊನ್ನೆಯ ಹಿಂದೆ ಒಂದು ಅಂಕಿ ಸೇರ್ಪಡೆಯಾದರೆ ಸೊನ್ನೆಗೆ ಮೌಲ್ಯ ಬರುತ್ತದೆ. ಹಾಗೆಯೇ ಸತ್ಕಾರ್ಯ ಮತ್ತು ಪ್ರಾಮಾಣಿಕತೆಯಿಂದ ಗಳಿಸಿದ ಸಂಪತ್ತಿಗೆ ಸಮಾಜ ಮತ್ತು ದೇಶದಲ್ಲಿ ಮೌಲ್ಯವಿದೆ. ವಿವೇಕಾನಂದರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಧರ್ಮದ ದಾರಿಯಲ್ಲಿ ನಡೆದಾಗ ಮಾತ್ರ ವ್ಯಕ್ತಿಗತ ವಿಕಾಸದ ಜತೆಗೆ ಇಡೀ ಸಮಾಜೋದ್ಧಾರ ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪಾರಂಪರಿಕ ವೈದ್ಯರಾದ ಡಾ.ಹನುಮಂತರಾವ್ ಮಳಲಿಯವರು ಸ್ವದೇಶಿ ಮತ್ತು ಸ್ವಾಸ್ಥ್ಯ ಎಂಬ ವಿಷಯದ ಬಗ್ಗೆ ಮಾತನಾಡುತ್ತ ಸಂಸ್ಕಾರದ ಕೊರತೆಯಿಂದಾಗಿ ರೋಗ ಬರುತ್ತದೆ, ನಮ್ಮ ಪೂರ್ವಿಕರು ಹಾಕಿಕೊಟ್ಟ ಷೋಡಶ ಸಂಸ್ಕಾರವನ್ನು ಇಂದು ನಾವು ಮರೆತಿದ್ದೇವೆ ಆದ ಕಾರಣ ನಮ್ಮ ಸಮಾಜದಲ್ಲಿ ಅರಾಜಕತೆ ಉಂಟಾಗುತ್ತಿದೆ ಎಂದರು.

ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಇದರ ಅಧ್ಯಕ್ಷರಾದ ಎಮ್.ಎಸ್.ವೆಂಕಟೇಶ್ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಮೊದಲ ಎರಡು ವಿಶ್ವಯುದ್ಧಗಳ ನಂತರ ಪ್ರಸ್ತುತ ಆರ್ಥಿಕ ಕ್ಷೇತ್ರದಲ್ಲಿ ಮೂರನೆಯ ಯುದ್ಧ ನಡೆಯುತ್ತಿದೆ. ಕೆಲವೇ




ದೇಶಗಳು ಆರ್ಥಿಕವಾಗಿ ವಿಶ್ವವನ್ನು ಆಳಲು ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ಭಾರತದ ಪಾತ್ರವು ತುಂಬಾ ಮಹತ್ವದ್ದಾಗಿದೆ. ಆರ್ಥಿಕ ಕ್ಷೇತ್ರದಲ್ಲಿ ಸ್ಥಿರತೆ ಗಳಿಸುವ ನಮ್ಮ ದೇಶದ ಪ್ರಯತ್ನದಲ್ಲಿ ಮಯೂರ ಸೌಹಾರ್ದವು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ದೀಪದ ಜ್ಯೋತಿಯಂತೆ ಬೆಳಗುತ್ತಿರುವುದು ನಮಗೆಲ್ಲರಿಗೂ ಸಂತೋಷ ನೀಡಿದೆ ಎಂದರು.

ಅಭಿರಾಮ್ ಭಾಗವತ್ ಪ್ರಾರ್ಥಿಸಿದರು, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಮ್.ಎನ್.ಶ್ರೀನಿವಾಸ್ ಮೂರ್ತಿ ಸಂಸ್ಥೆಯ ಕಿರುಪರಿಚಯ ಮಾಡಿದರು, ಶಿವಮೊಗ್ಗ ಶಾಖೆಯ ಸಲಹೆಗಾರರಾದ ಅ.ನಾ.ವಿಜಯೇಂದ್ರರಾವ್ ಸ್ವಾಗತಿಸಿದರು, ಎಸ್.ಎಮ್. ರಾಮಚಂದ್ರಯ್ಯ ವಂದಿಸಿದರು, ಎಮ್.ಬಿ.ಸುರೇಶ್ ಕಾರ್ಯಕ್ರಮ ನಿರೂಪಿಸಿದರು. ■

### ಶಿಕ್ಷಣ ನಿಧಿ ಸಲಹಾ ಸಮಿತಿಗೆ ನಾಮ ನಿರ್ದೇಶನ



ಕರ್ನಾಟಕ ಸಹಕಾರ ಅಧಿನಿಯಮ 1997 ಹಾಗೂ ಸಹಕಾರ ನಿಯಮಗಳು 2004 ಕಲಂ 10ಬಿ ಪ್ರಕಾರ ಸಹಕಾರ ಶಿಕ್ಷಣ ನಿಧಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ವಹಿಸತಕ್ಕದ್ದು ಹಾಗೂ ಪೋಷಿಸತಕ್ಕದ್ದು ಎಂದು ತಿಳಿಸಿರುತ್ತದೆ. ಇದರ ಪ್ರಕಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಓರ್ವ ಸಹಕಾರ ಶಿಕ್ಷಣ / ತರಬೇತಿ ಕುರಿತು ತಜ್ಞರನ್ನು ನೇಮಕ ಮಾಡುವುದಕ್ಕೆ ತಿಳಿಸಿರುವುದರಿಂದ ಬೆಳಗಾವಿ ಜಿಲ್ಲೆಯ ಹಿರಿಯ ಸಹಕಾರಿಗಳು, ಅನುಭವಿಗಳು ಆದ ಶ್ರೀ ಬಸವರಾಜ್ ಸುಲ್ತಾನ್ ಪುರಿ ಇವರನ್ನು ಎರಡು ವರ್ಷಗಳ ಅವಧಿಗೆ ನಾಮ ನಿರ್ದೇಶನ ಮಾಡಲಾಗಿದೆ.

## ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿ

# ಪರಿಣಿತಿ ಸಾಧನೆಗೆ ನಿರಂತರ ಪರಿಶ್ರಮ ಅಗತ್ಯ – ಎಸ್.ಪಿ.ನಾಯಕ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ದಿನಾಂಕ 30,31 ಜನೇವರಿ ಎರಡು ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾರವಾರದ ಶಿಕ್ಷಣ ತಜ್ಞ, ಖ್ಯಾತ ನ್ಯಾಯವಾದಿ, ಬ್ಯಾಂಕಿಂಗ ತಜ್ಞ ಹಾಗೂ ಸಹಕಾರಿ ಮುಖಂಡ ಶ್ರೀ ಎಸ್.ಪಿ.ನಾಯಕರವರು ಮಾತನಾಡಿ ಸಹಕಾರಿಗಳು ಸಹಕಾರಿ ಸಂಸ್ಥೆಗಳನ್ನು ತಮ್ಮ ವ್ಯಯಕ್ತಿಕ ಲಾಭಕ್ಕಾಗಿ ಉಪಯೋಗಿಸಬಾರದು.ಸೇವಾ ಮನೋಭಾವ ಹೊಂದಿರಬೇಕು. ಪೂರ್ಣ ಜ್ಞಾನವನ್ನು ಹೊಂದಿರ ಬೇಕು. ಧರ್ಮದರ್ಶಿಗಳಾಗಿ ಕಾರ್ಯನಿರ್ವಹಿಸುವುದು ಅವಶ್ಯಕ. ರಾಜಕೀಯ,ಧಾರ್ಮಿಕ,ಜಾತೀಯ ವಿಚಾರಗಳಿಗೆ ತಟಸ್ಥ ಧೋರಣೆಯನ್ನು ತಳೆಯುವುದು ಅವಶ್ಯಕ. ಬಡವರಿಗೆ ಅಸಹಾಯಕರಿಗೆ ಸಹಾಯ ಮಾಡುವುದು ಒಳ್ಳೆಯದು ಆದರೆ ಯಾರಿಗೂ ಕಾನೂನು ಹಾಗೂ ನಿಯಮಗಳ ವ್ಯಾಪ್ತಿಯನ್ನು ಹೊರತು ಪಡಿಸಿ ಸಹಾಯಮಾಡುವ ಸಾಹಸ ಒಳ್ಳೆಯದಲ್ಲ. ಮಾನವೀಯ ಮೌಲ್ಯಗಳನ್ನು ಅಳವಡಿಸಿ ಅನುಷ್ಠಾನಗೊಳಿಸುವಲ್ಲಿ ಹಿಂದೆ ಬೀಳಬಾರದು. ಎಲ್ಲದಕ್ಕಿಂತಲೂ ಹೆಚ್ಚಾಗಿ ಭ್ರಷ್ಠಾಚಾರಿಯಾಗಿರಬಾರದು ಮತ್ತು ಸಮಾನ ಮನಸ್ಕತೆಯನ್ನು ಹೆಚ್ಚಿಸಿಕೊಳ್ಳವುದು ಅತ್ಯಂತ ಅಗತ್ಯ ಎಂದು ತಿಳಿಸುತ್ತ ಮುಂದಿನ 5 ವರ್ಷಗಳಲ್ಲಿ ಎಲ್ಲವೂ ಸಹಕಾರಿ ಮಯವಾಗಬಹುದಾಗಿದೆ. ರಿಸರ್ವ್ ಬ್ಯಾಂಕಿನವರು ಈ ದೇಶದ ಅರ್ಥವ್ಯವಸ್ಥೆಯ ಭದ್ರತೆಗಾಗಿ ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿ ಮಾಡುತ್ತಿರುವುದು ಒಳ್ಳೆಯದು ಮುಂಬರುವ ದಿನಗಳಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಬ್ಯಾಂಕಿಂಗ ಲೈಸೆನ್ಸ್ ನೀಡುವ ಸಾಧ್ಯತೆಯಿದೆ. ಇದರಿಂದ ಸಹಕಾರಿ ಕ್ಷೇತ್ರಕ್ಕೆ ಬಲವಾದ ಪೆಟ್ಟು ಬೀಳುವ



ಸಾಧ್ಯತೆ ಇದೆ. ಸಹಕಾರಿಗಳು ಈಗಲೆ ಎಚ್ಚತ್ತುಕೊಂಡು ಸಹಕಾರಿ ಕ್ಷೇತ್ರದ ಭದ್ರತೆಗೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸುತ್ತ. ಪರಿಣಿತಿ ಸಾಧನೆಗೆ ನಿರಂತರ ಪರಿಶ್ರಮ ಅಗತ್ಯ ಎಂದು ತಿಳಿಸಿದರು. ತಮ್ಮ ಸುದೀರ್ಘವಾದ ಭಾಷಣದಲ್ಲಿ ಬ್ಯಾಂಕಿಂಗ ಕ್ಷೇತ್ರದ ಹಾಗೂ ಸಹಕಾರಿ ಕ್ಷೇತ್ರದ ಅನೇಕ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ನಂತರ ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ನಿವೃತ್ತ ನಿರ್ದೇಶಕ ಶ್ರೀ ಎಸ್.ಎ.ಸಿದ್ದಾಂತಿ ಯವರು ಸಹಕಾರಿ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು ಹಾಗೂ ನಿರ್ದೇಶಕರಿಗೆ ಸವಾಲುಗಳು ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ತರಬೇತಿ ಕಾರ್ಯಕ್ರಮದ ಒಂದನೇಯ ದಿನ ಗೋವಾ ರಾಜ್ಯ ಸಹಕಾರ ಸಂಘ, ಗೋವಾ ಸಹಕಾರ ಸಂಘಗಳ ನಿಬಂಧಕರನ್ನು ಹಾಗೂ ಗೋವಾ ರಾಜ್ಯ ಸಹಕಾರ ಮಂತ್ರಿಗಳನ್ನು ಭೇಟಿಮಾಡಲಾಯಿತು.

## ಗೋವಾ ಸ್ಟೇಟ್ ಕೋ-ಆಪರೇಟಿವ್ ಯೂನಿಯನ್‌ಗೆ ಭೇಟಿ



ಗೋವಾ ರಾಜ್ಯ ಸಹಕಾರಿ ಯೂನಿಯನ್ಗೆ ಭೇಟಿ ನೀಡಿ ರಾಜ್ಯದ ಸಹಕಾರಿ ಚಳುವಳಿಯ ಕಾರ್ಯಚಟುವಟಿಕೆಗಳನ್ನು ಹಾಗೂ ಪ್ರಗತಿಯನ್ನು ಅಧ್ಯಯನ ಮಾಡಲಾಯಿತು. ತರಬೇತಿ ಕಾರ್ಯಕ್ರಮಗಳ ವೈವಿಧ್ಯತೆಗಳನ್ನು ಅಧ್ಯಯನ ಮಾಡಿ ನಮ್ಮ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಒಟ್ಟಾರೆ ಸಹಕಾರಿ ಕ್ಷೇತ್ರದ ತರಬೇತಿ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡಲಾಯಿತು. ಗೋವಾ ರಾಜ್ಯ ಸಹಕಾರಿ ಸಂಘದ ಉಪಾಧ್ಯಕ್ಷ ಶ್ರೀ ಉಮೇಶ ಶೀರೋಡಕರ ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮಹಾತ್ಮೆಯವರು ಉಪಸ್ಥಿತರಿದ್ದು ಅಗತ್ಯ ವಿವರ ನೀಡಿದರು.



# "ಸಹಕಾರಿ ತತ್ವಗಳ ಅನುಷ್ಠಾನವೇ ಸಹಕಾರಿಗಳ ಯಶಸ್ವಿಗೆ ಕಾರಣ"

ದಿನಾಂಕ : 29–01–2014 ರಂದು ಕಾರವಾರದ ತರಂಗ ರೆಸಾರ್ಟ್ಸ್‌ನಲ್ಲಿ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯ ಕಾರ್ಯ ನಿರ್ವಾಹಕರು ಹಾಗೂ ಹಿರಿಯ ಅಧಿಕಾರಿ ಗಳಿಗಾಗಿ "ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ" ಕಾರ್ಯಾಗಾರವನ್ನು ಶ್ರೀಯುತ ಎಮ್.ಹೆಚ್ ನಾಯಕ, ಮಾನ್ಯ ಪ್ರಾಂಶುಪಾಲರು, ದಿವಾಕರ ಕಾಮರ್ಸ್ ಕಾಲೇಜ, ಕಾರವಾರ ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಗುರುನಾಥ ಜ್ಯಾಂತಿಕರ್ ವಹಿಸಿದ್ದರು. ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಶ್ರೀಯುತ ಹೆಚ್.ವಿ. ರಾಜೀವ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರು, ಶ್ರೀಯುತ ಭಾಸ್ಕರ್ ಹೆಗಡೆ ಕಾಗೇರಿ ನಿರ್ದೇಶಕರು, ಕ.ರಾ.ಸೌ. ಸಂ.ಸ.ನಿ., ಬೆಂಗಳೂರು ಹಾಗೂ ಶ್ರೀಯುತ ಜಿ. ನಂಜನಗೌಡ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಉಪಸ್ಥಿತರಿದ್ದರು.




ಉದ್ಘಾಟಣೆಯನ್ನು ನೆರವೇರಿಸಿದ ಶ್ರೀಯುತ ಎಮ್.ಹೆಚ್ ನಾಯಕ ಇವರು"ನಮ್ಮ ಬ್ಯಾಂಕುಗಳಿಗೆ ನಾವೇ ಕೆಲವು ತತ್ವಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದೇವೆ. ನಮ್ಮ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿವೆ, ಸಂಯುಕ್ತ ಸಹಕಾರಿಯು ನೀಡುವ ತರಬೇತಿ ಕಾರ್ಯಕ್ರಮ ಗಳನ್ನು ಚೆನ್ನಾಗಿ ಆಯೋಜನೆ ಮಾಡುತಿದ್ದು, ಕರ್ನಾಟಕದ ಯುವ ಜನತೆ ಈ ಕ್ಷೇತ್ರದಿಂದ ಆಕರ್ಷಿತವಾಗುತ್ತಿರುವುದು ಸಂತೋಷದ ವಿಷಯ ಎಂದರು

ಶ್ರೀಯುತ ಜಿ. ನಂಜನಗೌಡ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು "ರಿಜರ್ವ ಬ್ಯಾಂಕ ಆಫ್ ಇಂಡಿಯಾ ಇದು ಬ್ಯಾಂಕುಗಳಿಗೆ ಹೆಚ್ಚಿನ ನಿಬಂದನೆಗಳನ್ನು ಹಾಕುತ್ತಿರುವುದರಿಂದ ಬ್ಯಾಂಕುಗಳನ್ನು ನಡೆಸುವುದು ಕಷ್ಟ ಸಾಧ್ಯವಾಗುತ್ತಿದೆ. ಸಹಕಾರಿ ಸಂಸ್ಥೆಗಳಿಗೆ ವಿಧಿಸುವ ತೆರಿಗೆಯ ಬಗ್ಗೆ ಕೇಂದ್ರ ಮತ್ತೊಮ್ಮೆ ಆಲೋಚಿಸುವುದು ಉತ್ತಮ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಗುರುನಾಥ ಜ್ಯಾಂತಿಕರ್ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "ಸೌಹಾರ್ದ ಸಹಕಾರಿಗಳಲ್ಲಿ ಜನರು ಯಾವುದೇ ಕಾಯ್ದೆ ಕಾನೂನನ್ನು ನೊಡಿ ಹಣವನ್ನು ತೊಡಗಿಸುವುದಿಲ್ಲ. ನಮ್ಮ

16ನೇ ಪುಟಕ್ಕೆ...



**ಸಹಕಾರಿ ಸಚಿವ ಶ್ರೀ ದೀಪಕ ಧವಲೀಕರ ಭೇಟಿ :** ಗೋವಾ ಸಹಕಾರಿ ಸಚಿವ ಶ್ರೀ ದೀಪಕ ಧವಲೀಕರರವರನ್ನು ಅವರ ಕಚೇರಿಯಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರು ಭೇಟಿಯಾಗಿ ಗೋವಾ ಸಹಕಾರಿ ಚಳುವಳಿಯ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿ ಚಳುವಳಿಯ ಸಾಧನೆಗಳ ಬಗ್ಗೆ ವಿವರಿಸಿದರು. ಈ ಚಳುವಳಿಯ ವಿವರಗಳನ್ನು ತಿಳಿದ ಗೋವಾ ಸಹಕಾರ ಸಚಿವ ಶ್ರೀ ದೀಪಕರವರು ಇದೊಂದು ಉತ್ತಮ ಕಾಯ್ದೆಯಾಗಿದೆ. ನಿಜವಾಗಿಯೂ ಸಹಕಾರಿಗಳಿಗೆ ಸ್ವಾತಂತ್ರವನ್ನು ನೀಡುವ ಈ ಕಾಯ್ದೆಯನ್ನು ಅಧ್ಯಯನಮಾಡಿ ಗೋವಾ ರಾಜ್ಯದಲ್ಲಿ ಅಳವಡಿಸುವ ಬಗ್ಗೆ ಚಿಂತನೆ ಮಾಡಲಾಗುವುದು ಎಂದು ತಿಳಿಸಿದರು.

# ರಾಜ್ಯದ ಸೌಹಾರ್ದ ಸಹಕಾರ ಸಂಸ್ಥೆಗಳಿಂದ ಜನವರಿ



ಅರಿಹಂತ ಅರ್ಬನ ಸೌಹಾರ್ದ
ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ




ಅರಿಹಂತ ಅಲ್ಪಸಂಖ್ಯಾತರ ವಿವಿಧ ಉದ್ದೇಶಗಳ
ಸೌಹಾರ್ದ ಸಹಕಾರಿ ನಿಯಮಿತ ಧುಪದಾಳ



ಬಲಿಜ ಸೌಹಾರ್ದ ಪತ್ತಿನ
ಸಹಕಾರಿ ನಿಯಮಿತ ಶಿವಮೊಗ್ಗ



ವಿಕಾಸ ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಯಲಬುರ್ಗಾ ಕೊಪ್ಪಳ ಇದರ ಪ್ರಥಮ ವಾರ್ಷಿಕೋತ್ಸವ ಹಾಗೂ ಮಹಾಸಭೆಯನ್ನು ಸಹಕಾರಿ ಕಾರ್ಯಾಲಯದಲ್ಲಿ ಜರುಗಿತು.



ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ನಿಯಮಿತ ಮಂಗಳೂರು ಸೌಹಾರ್ದ ಸಹಕಾರಿ ದಿನಾಚರಣೆ



ಶ್ರೀ ಗಾಯತ್ರಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಹುಳಿಯಾರು ಸೌಹಾರ್ದ ಸಹಕಾರಿ ದಿನಾಚರಣೆ

# 1 ರಂದು ಸೌಹಾರ್ದ ಸಹಕಾರಿ ದಿನ ಆಚರಣೆ



ಶ್ರೀ ಕನ್ಯಾಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ ಚಿತ್ರದುರ್ಗ ಸದರಿ ಸೌಹಾರ್ದ ಸಹಕಾರಿಯು ಸೌಹಾರ್ದ ಸಹಕಾರಿ ದಿನಾಚರಣೆ ಪ್ರಯುಕ್ತ ದಿನಾಂಕ 12.01.2014 ರಂದು ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಬೆಂಗಳೂರಿನ ಖ್ಯಾತ ಹೃದ್ರೋಗ ತಜ್ಞರಾದ ಡಾ॥ ಯೋಗೀಶ್ ಕೊಠಾರಿ ಇವರಿಂದ ನಡೆಸಿಕೊಡಲಾಯಿತು. ಶಿಬಿರದಲ್ಲಿ 100 ಜನ ಸದಸ್ಯರು ಇದರ ಪ್ರಯೋಜನವನ್ನು ಪಡೆದರು.




ಪದ್ಮಶಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ.



ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ



ಶ್ರೀ ಶಾರದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ನಿಪ್ಪಾಣಿ



ಶ್ರೀ ಹಳದರಂಗ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಹಳ್ಳೂರು



ಬಸವಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಕೋಟೆ



ಪರಿವರ್ತನ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ ಮೈಸೂರು ಇದರ ಕ್ಯಾಲೆಂಡರ್ ಬಿಡುಗಡೆಯನ್ನು ಶ್ರೀ ಎಸ್.ಎ.ರಾಮ್‌ದಾಸ್ ಉಸ್ತುವಾರಿ ಸಚಿವರು ನೆರವೇರಿಸಿದರು.



ಜಂಗಮ ಸೌಹಾರ್ದ ಸಹಕಾರಿ ನಿಯಮಿತ ದಾವಣಗೆರೆ ಶ್ರೀ ಷ॥ಬ್ರ॥ ಓಂಕಾರ ಶಿವಚಾರ್ಯ ಸ್ವಾಮಿಗಳು ಪುರವರ್ಗ ಹಿರೇಮಠ ಅವರಗೊಳ್ಳ ಇವರು ಉದ್ಘಾಟಿಸಿದರು ಉದ್ಘಾಟನಾ ಸಮಾರಂಭದಲ್ಲಿ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.



ಸವಿತಾ ಸಮಾಜ ವಿವಿದೋದ್ದೇಶ ಸೌಹಾರ್ದ ಸಹಕಾರಿ (ನಿ) ಉಡುಪಿ ಇದರ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಸಹಕಾರಿಯ ಸುತ್ತಮುತ್ತ ಸ್ವಚ್ಚತೆಯನ್ನು ಮಾಡಿ ಜನರಿಗೆ ಅದರ ಬಗ್ಗೆ ಮಾಹಿತಿ ನೀಡಿ ಶ್ರಮದಾನ ಮಾಡುವುದರೊಂದಿಗೆ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



ಜಂಗಮ ಸೌಹಾರ್ದ ಸಹಕಾರಿ ನಿಯಮಿತ ದಾವಣಗೆರೆ ಇದರ ಕ್ಯಾಲೆಂಡರ್‌ನ್ನು ಶ್ರೀ ಷ॥ಬ್ರ॥ಓಂಕಾರ ಶಿವಾಚಾರ್ಯ ಸ್ವಾಮಿಗಳು ಹಾಗೂ ಹಿರಿಯ ಸಹಕಾರಿಗಳು ಬಿಡುಗಡೆಗೊಳಿಸಿದರು.



ಪ್ರಗತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ (ನಿ) ಶಿವಮೊಗ್ಗ



ವಂದೇ ಮಾತರಂ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಕುಂದಾಪುರ



ದಿನಾಂಕ : 17.01.2014ರಂದು ನಡೆದ ವಿವಿಧ ಠೇವಣಿ ಸೌಲಭ್ಯಗಳ ಉದ್ಘಾಟನಾ ಕಾರ್ಯಕ್ರಮವನ್ನು ಶ್ರೀ ಗುರು ಸೌಹಾರ್ದ ಸಹಕಾರಿ ಇದರ ತೊಕ್ಕೊಟ್ಟು ಶಾಖೆ ಮಂಗಳೂರು ಇಲ್ಲಿ ನೆರವೇರಿಸಲಾಯಿತು.



ದಿನಾಂಕ : 13.01.2014ರಂದು ಗುಲಬರ್ಗಾ ವಿಭಾಗೀಯ ಕಛೇರಿಗೆ ಶ್ರೀ ರವಿಕುಮಾರ ರಿಜನಲ್ ಮ್ಯಾನೇಜರ್, ಸ್ಟಾಕಹೊಲ್ಡಿಂಗ್ ಕಾರ್ಪೋರೇಶನ ಆಫ್ ಇಂಡಿಯಾ., ಹೈದ್ರಾಬಾದ ಭೇಟಿ ವೇಳೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಹಾಗೂ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ ಮಹಾಜನ ಇವರುಗಳು ಹಾಜರಿದ್ದರು.



ಜೈಹಿಂದ ಸೌಹಾರ್ದ ಪತ್ತಿನ ಸಹಕಾರಿ ನಿ., ಹುಕ್ಕೇರಿ ಇದರ ಅಧ್ಯಕ್ಷರಾದ ಶ್ರೀ ಮೀರಾಸಾಹೇಬ ಎಸ್.ಮೋಮಿನ್ – 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರನ್ನು ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿ(ರಿ) ಇವರು ಸನ್ಮಾನಿಸಿದರು.

### ಸೂರ್ಯಕಿರಣ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ತುಮಕೂರು ಇದರ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



ಕಿರಣ್
ಅಧ್ಯಕ್ಷರು



ಕಿರಣ್‌ಕುಮಾರ್ ಪಿ.
ಉಪಾಧ್ಯಕ್ಷರು

### ಫೆಬ್ರವರಿ ಮಾಹೆಯಲ್ಲಿ ಅಧ್ಯಕ್ಷರ ಪ್ರವಾಸ ಕಾರ್ಯಕ್ರಮ

| | | |
|---|---|---|
| 1 | – | ಹುಬ್ಬಳ್ಳಿ, |
| 2 | – | ಬೀದರ. |
| 3 | – | ಬೆಂಗಳೂರು, |
| 4 | – | ಬೀದರ, |
| 5 | – | ಗುಲ್ಬರ್ಗಾ, |
| 6,7 | – | ಬೀದರ, |
| 8 | – | ತುಮಕೂರ, |
| 9,10,11 | – | ಬೀದರ, |
| 12 | – | ಬೆಳಗಾವಿ, |
| 13,14,15 | – | ಗುಲ್ಬರ್ಗಾ, |
| 16 | – | ಮೈಸೂರು, |
| 17,18,19 | – | ಬೆಂಗಳೂರು, |
| 20,21 | – | ಬೀದರ, |
| 22,23 | – | ಬೆಂಗಳೂರು, |
| 24 | – | ಕೊಪ್ಪಳ, |
| 25,26 | – | ಬೀದರ |
| 27,28 | – | ಬೆಂಗಳೂರು |

ಬೆಂಗಳೂರಿನ ಕೇಂದ್ರ ಕಛೇರಿ, ಗುಲ್ಬರ್ಗಾದ ವಿಭಾಗೀಯ ಕಛೇರಿಗಳಲ್ಲಿ

# ಸಂಭ್ರಮದ 65ನೇ ಗಣರಾಜ್ಯೋತ್ಸವ ದಿನಾಚರಣೆ





ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ.ಪಾಟೀಲರವರು ಧ್ವಜಾರೋಹಣಾ ಮಾಡಿದರು. ನಂತರ ಮಾತನಾಡಿ ದೇಶದ 65ನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ಪ್ರತಿಯೊಬ್ಬ ನಾಗರೀಕರು ದೇಶದ ಅಭಿವೃದ್ಧಿಯ ಬಗ್ಗೆ ಹೆಚ್ಚು ಕಾಳಜಿವಹಿಸುವುದು ಅಗತ್ಯವೆಂದು ತಿಳಿಸಿದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ ಕುಮಾರ್ ರವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಗುಲಬರ್ಗಾ ವಿಭಾಗೀಯ ಕಛೇರಿಯಲ್ಲಿ 65ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರ ಅವರು ಅತಿಥಿಗಳನ್ನು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸಂಜೀವ ಎಸ್. ಮಹಾಜನ್, ಅಧ್ಯಕ್ಷರು, ಸಿದ್ಧಿ ವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲಬರ್ಗಾ ಧ್ವಜಾರೋಹಣ ಮಾಡಿದರು. ಶ್ರೀ ಎಸ್. ಎಸ್.ಪಾಟೀಲ್, ಉಪಾಧ್ಯಕ್ಷರು, ಸಿದ್ಧಿ ವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲಬರ್ಗಾ, ಶ್ರೀ ಪ್ರದೀಪ್ ದಾಬಶೇಟ್ಟಿ, ಅಧ್ಯಕ್ಷರು, ಕಲ್ಯಾಣನಾಡು ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಗುಲಬರ್ಗಾ ಹಾಗೂ ಗುಲಬರ್ಗಾ ನಗರದ ಕೆಲವು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಮತ್ತು ಗುಲಬರ್ಗಾ ವಿಭಾಗೀಯ ಕಛೇರಿಯ ಸಿಬ್ಬಂದಿಗಳು ಹಾಜರಿದ್ದರು.

## ಸೌಹಾರ್ದ ಸಹಕಾರಿಗಳ ಅಂತರರಾಜ್ಯ ಅಧ್ಯಯನ ಪ್ರವಾಸ

2014 ಫೆಬ್ರವರಿ ಮಾಹೆಯಲ್ಲಿ ಆಯೋಜಿಸಲಾಗಿದ್ದ ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಯನ ಪ್ರವಾಸವನ್ನು ನಿಗದಿತ ಸಮಯದಲ್ಲಿ ನಿಗದಿತ ಸಂಖ್ಯೆಯಲ್ಲಿ ಪ್ರತಿನಿಧಿಗಳ ನೊಂದಣೆಯಾಗದಿದ್ದ ಪ್ರಯುಕ್ತ ತಾತ್ಕಾಲಿಕವಾಗಿ ಮುಂದೂಡಲಾಗಿದೆ. **ಹಾಲಿ ನೊಂದಣಿ ಮಾಡಿದ ಪ್ರತಿನಿಧಿಗಳು ಈ ವಿಷಯವನ್ನು ಗಮನಿಸಲು ಕೋರಿದೆ.** ಇನ್ನು ನೊಂದಣೆ ಮಾಡಲು ಅಪೇಕ್ಷಿಸುವವರು ತಮ್ಮ ಹೆಸರನ್ನು ನೊಂದಣೆ ಮಾಡಿಸಬಹುದಾಗಿದೆ.

ಅಧ್ಯಯನ ಪ್ರವಾಸದ ಅವಧಿ 10 ದಿನಗಳು. ಬೆಂಗಳೂರು – ಗೋವಾ – ಕೊಲ್ಲಾಪುರ – ಪೂನಾ – ಮುಂಬೈ – ಆನಂದ (ಅಮೂಲ) ಅಹಮದಾಬಾದ್ – ರಾಜಕೋಟ್ – ವ್ಹಾಯಾ ಬೆಳಗಾವಿ ಇಂದ ಬೆಂಗಳೂರು ಸೇರುವುದು. ವಿವಿಧ ರೀತಿಯ ಸಹಕಾರ ಸಂಸ್ಥೆಗಳಿಗೆ ಹಾಗೂ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಲು ವ್ಯವಸ್ಥೆಮಾಡಲಾಗುವುದು. 2 + 2ಪುಶ್ ಬ್ಯಾಕ್ ಸೀಟುಗಳು. ಪ್ರತಿದಿನ ಸಿಟ್ಟಿಂಗ ವ್ಯವಸ್ಥೆಯಲ್ಲಿ ಬದಲಾವಣೆ (ರೊಟೇಶನ್ ಸಿಸ್ಟೆಮ್) ಜೊತೆಯಲ್ಲಿ ಊಟ ತಿಂಡಿ ವ್ಯವಸ್ಥೆ ಇರುತ್ತದೆ. 2 ಅಥವಾ 3 ಜನ ಶೇರಿಂಗ ವಸತಿ ವ್ಯವಸ್ಥೆ ಇರುತ್ತದೆ. ಪ್ರವಾಸ ವೆಚ್ಚ ರೂ. 15000/- ಮುಂಗಡವಾಗಿ ಪಾವತಿಸುವುದು. ಸೀಟುಗಳು ಭರ್ತಿಯಾದ ನಂತರ ಪ್ರವಾಸದ ದಿನವನ್ನು ನಿಗಧಿಗೊಳಿಸಲಾಗುವುದು.

# ಸಂಯುಕ್ತ ಸಹಕಾರಿಯ ಕಛೇರಿಗೆ ಸಹಕಾರಿ ಇಲಾಖೆಯ ಕಾರ್ಯದರ್ಶಿ ಡಾ.ಸೋಮಶೇಖರ ಭೇಟಿ

ದಿನಾಂಕ : 17/1/2014 ರಂದು ಸಹಕಾರಿ ಇಲಾಖೆಯ ಕಾರ್ಯದರ್ಶಿ ಡಾ. ಸೋಮಶೇಖರರವರು ಸಂಯುಕ್ತ ಸಹಕಾರಿಯ ಕಚೇರಿಗೆ ಭೇಟಿ ನೀಡಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಪರಿಶೀಲಿಸಿ ನಿರ್ದೇಶಕರೂಡನೆ ಚರ್ಚೆ ನಡೆಸಿದರು.

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗುವಂತೆ ಹಾಗೂ ಸೌಹಾರ್ದ ಸಹಕಾರಿ ಕಾನೂನಿನ ಆಶಯದಂತೆ ಸೌಹಾರ್ದ ಸಹಕಾರಿ ಕಾಯ್ದೆಗೆ ಮುಂಬರುವ ದಿನಗಳಲ್ಲಿ ತಿದ್ದುಪಡಿಗಳನ್ನು ಮಾಡಲು ಕ್ರಮವಿಡಲಾಗುವುದು ಎಂದು ತಿಳಿಸುತ್ತ ಈ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾನೂನು ಜಾರಿಗೆ ಬಂದಿರುವುದು ಸಹಕಾರಿ ಕ್ಷೇತ್ರಕ್ಕೆ ಹಾಗೂ ಕರ್ನಾಟಕ ರಾಜ್ಯಕ್ಕೆ ಹೆಮ್ಮೆಯ ವಿಷಯ. ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುವಲ್ಲಿ ಸಂಯುಕ್ತ ಸಹಕಾರಿಯ ಪಾತ್ರ ಅತ್ಯಂತ ಮಹತ್ವದ್ದು. ಇದನ್ನು ಸಂಯುಕ್ತ ಸಹಕಾರಿಯು ಉತ್ತಮವಾಗಿ ನಿರ್ವಹಿಸಲು ಅಗತ್ಯವಾಗುವ ನೆರವನ್ನು ನೀಡಲು ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿ ಇಲಾಖೆಯ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವ ಮೂರ್ತಿಯವರು ಉಪಸ್ಥಿತರಿದ್ದು ಶ್ರೀಯುತರೂಡನೆ ಸೌಹಾರ್ದ ಸಹಕಾರಿ ಚಳುವಳಿಯ ಹಾಗು ಸೌಹಾರ್ದ ಸಹಕಾರಿ ಕಾನೂನಿನ ತಿದ್ದುಪಡಿಗಳ ಬಗ್ಗೆ ಚರ್ಚೆ ನಡೆಸಿದರು.



ಶ್ರೀಯುತರು ಪ್ರಥಮಬಾರಿಗೆ ಸಂಯುಕ್ತ ಸಹಕಾರಿಯ ಕಚೇರಿಗೆ ಭೇಟಿನೀಡುತ್ತಿರುವುದರಿಂದ ಅವರನ್ನು ಶಾಲುಹೊದಿಸಿ ಫಲಪುಷ್ಪ ನೀಡಿ ಸನ್ಮಾನಿಸಲಾಯಿತು.

## ಶ್ರೀ ಸಿ.ಎನ್.ಪರಶಿವಮೂರ್ತಿ ಯವರಿಗೆ ಅಭಿನಂದನೆ



ಕರ್ನಾಟಕ ಸರಕಾರದ ಪ್ರತಿಷ್ಠಿತ "ಸಹಕಾರಿ ರತ್ನ" ಪ್ರಶಸ್ತಿ ಪುರಸ್ಕೃತ ಶ್ರೀ ಸಿ.ಎನ್.ಪರಶಿವಮೂರ್ತಿಯವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಅಭಿನಂದಿಸಲಾಯಿತು. ಶ್ರೀಯುತರು ಸಹಕಾರಿ ಇಲಾಖೆಯಲ್ಲಿ ಸಲ್ಲಿಸಿದ ಸೇವೆ ಸೌಹಾರ್ದ ಸಹಕಾರಿ ಕಾನೂನಿನ ರಚನೆಯಲ್ಲಿ ನಿರ್ವಹಿಸಿದ ಮಹತ್ವದ ಪಾತ್ರ ನಂತರದ ದಿನಗಳಲ್ಲೂ ಸಹ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ವಹಿಸುತ್ತಿರುವ ಕಾಳಜಿ ಬಗ್ಗೆ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಹಾಗೂ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರು ಸಭೆಯಲ್ಲಿ ಪ್ರಶಂಸಿಸಿದರು ಇದೆ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ .ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿ ಇಲಾಖೆಯ ಕಾರ್ಯದರ್ಶಿ ಡಾ. ಸೋಮಶೇಖರವರು ಉಪಸ್ಥಿತರಿದ್ದರು.


## ಸಹಕಾರ ಚುನಾವಣಾ ಆಯೋಗದಿಂದ ಸಹಕಾರ ಸಂಘಗಳ ಪ್ರಾಂತೀಯ ಚುನಾವಣಾ ವೀಕ್ಷಕರ ನೇಮಕ

ಕರ್ನಾಟಕ ಸರಕಾರದ ಸಹಕಾರ ಚುನಾವಣಾ ಆಯೋಗದವರು ಕ್ರ.ಸಂಸಚುಆ / ಚುನಾವಣೆ/10/2013–14 ದಿ : 31–01–2014ರಂದು ಸುತ್ತೋಲೆಯ ಮೂಲಕ ರಾಜ್ಯದಲ್ಲಿ ಸಹಕಾರ ಸಂಸ್ಥೆಗಳಿಗೆ ಎರಡನೇ ಹಂತದಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ವಿಷಯವಾಗಿ ಪ್ರಾಂತೀಯ ಮಟ್ಟದಲ್ಲಿ ಮೇಲ್ವಿಚಾರಣೆ ನಡೆಸಲು ಸಹಕಾರ ಸಂಘಗಳ ಅಪರ ನಿಬಂಧಕರುಗಳನ್ನು ಪ್ರಾಂತ್ಯದ ಚುನಾವಣಾ ವೀಕ್ಷಕರನ್ನಾಗಿ ನೇಮಿಸಿ ಆದೇಶ ಹೊರಡಿಸಿದ್ದಾರೆ.

- ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) – ಬೆಂಗಳೂರು ಪ್ರಾಂತ್ಯ
- ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ) – ಗುಲ್ಬರ್ಗಾ ಪ್ರಾಂತ
- ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ)– ಮೈಸೂರು ಪ್ರಾಂತ್ಯ
- ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) – ಬೆಳಗಾಂ ಪ್ರಾಂತ್ಯ

ಪ್ರಾಂತೀಯ ಚುನಾವಣಾ ವೀಕ್ಷಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಮಾಧ್ಯಮಿಕ ಸಂಘಗಳಿಗೆ ಕಾನೂನು ರಿತ್ಯಾ ಚುನಾವಣೆ ನಡೆಸುವ ಸಂಬಂಧ ಆಯೋಗದ ಪರವಾಗಿ ಮೇಲ್ವಿಚಾರಣೆ, ಹಂತ ಹಂತದಲ್ಲಿ ಆದ ಪ್ರಗತಿ ಬಗ್ಗೆ ಚುನಾವಣಾ ಅಯೋಗಕ್ಕೆ ವರದಿ ಸಲ್ಲಿಸಲು ಕ್ರಮವಿಡುವುದೆಂದು ಆದೇಶದಲ್ಲಿ ಸೂಚಿಸಲಾಗಿದೆ.

# ದೇಶದ ವ್ಯವಸಾಯ ಉತ್ಪನ್ನ ಅಭಿವೃದ್ಧಿಗೆ ಸುಭದ್ರ ಸಹಕಾರ ಚಳುವಳಿ ಅಗತ್ಯ – ಡಾ.ಎ.ಪಿ.ಜೆ.ಅಬ್ದುಲ್ ಕಲಾಂ



**ಭುವನೇಶ್ವರ 27/1/2014 :** ಭಾರತದ ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ.ಅಬುಲ್ ಕಲಾಂರವರು ಭುವನೇಶ್ವರದಲ್ಲಿ ಓರಿಸ್ಸಾ ವ್ಯವಸಾಯ ಹಾಗೂ ತಂತ್ರಜ್ಞಾನ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತ ಈ ದೇಶದ ಮುಂದಿನ ದಿನಗಳಲ್ಲಿನ ಆಹಾರ ಬೇಡಿಕೆಯನ್ನು ಪೂರೈಸಬೇಕಾದರೆ ವ್ಯವಸಾಯ ಉತ್ಪನ್ನಗಳು ಹೆಚ್ಚಬೇಕು. ವ್ಯವಸಾಯ ಉತ್ಪನ್ನಗಳು ಹೆಚ್ಚಾಗಬೇಕಿದ್ದಲ್ಲಿ ಸುಭದ್ರ ಸಹಕಾರ ಚಳುವಳಿ ಅಗತ್ಯ ಎಂದು ಹೇಳಿದರು. ಮುಂದುವರೆದು ಮಾತನಾಡಿದ ಶ್ರೀಯುತರು ವಿಶ್ವವಿದ್ಯಾಲಯವು ಸಹಕಾರ ಕ್ಷೇತ್ರದ ಮೂಲಕ ವ್ಯವಸಾಯ ಹಾಗೂ ವ್ಯಾಪಾರ ಅಭಿವೃದ್ಧಿಗೆ ಪೂರಕವಾಗು ವಂತಹ ಪಠ್ಯಕ್ರಮವನ್ನು ಅಳವಡಿಸಲು ಸೂಚಿಸಿದರು. ಯುವಕರು ಉನ್ನತ ಮಟ್ಟದ ಶಿಕ್ಷಣವನ್ನು ಸಕಾಲದಲ್ಲಿ ಪಡೆದಾಗ ಮಾತ್ರ ದೇಶವು ಆರ್ಥಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತದೆ. ಎಂದು ಕರೆ ನೀಡಿದರು.

## ರಾಜ್ಯ ಸಹಕಾರ ನಿಬಂಧಕರ ವ್ಯಾಪ್ತಿಯಿಂದ ವಿನಾಯಿತಿ



ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯ ವ್ಯಾಪ್ತಿಯ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ರಾಜ್ಯ ಸಹಕಾರ ನಿಬಂಧಕರ ವ್ಯಾಪ್ತಿಯಿಂದ ವಿನಾಯಿತಿ.

ನ್ಯಾಫ್‌ಕಬ್ 31 ಜನೆವರಿ 2014 ದೇಶದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ನ್ಯಾಫ್‌ಕಬ್ ರವರು ಕೃಷಿ ಮಂತ್ರಾಲಯದ ಜೊತೆಗೆ ವ್ಯವಹರಿಸಿ ಬಹುರಾಜ್ಯ ಸಹಕಾರ ಸಂಘಗಳ ವ್ಯಾಪ್ತಿಯ ಪಟ್ಟಣ ಸಹಕಾರ ಬ್ಯಾಂಕುಗಳು ಇನ್ನು ಮುಂದೆ ಆಯಾ ರಾಜ್ಯಗಳ ಸಹಕಾರ ಸಂಘಗಳ ನಿಬಂಧಕರ ವ್ಯಾಪ್ತಿಯಿಂದ ವಿನಾಯಿತಿ ನೀಡಲಾಗಿದೆ ನ್ಯಾಫ್‌ಕಬ್ ಸುತ್ತೋಲೆಯಲ್ಲಿ ಎಂದು ತಿಳಿಸಲಾಗಿದೆ.

# "ಸಹಕಾರಿ ತತ್ವಗಳ ಅನುಷ್ಠಾನವೇ ಸಹಕಾರಿಗಳ ಯಶಸ್ವಿಗೆ ಕಾರಣ"

...9ನೇ ಪುಟದಿಂದ

ಆಡಳಿತ ಮಂಡಳಿಯನ್ನು ಅಲ್ಲಿನ ಮ್ಯಾನೇಜರ ಅವರನ್ನು ನೋಡಿ ಹಣವನ್ನು ತೊಡಿಗಿರಿಸಿರುತ್ತಾರೆ. ಆರ್.ಬಿ.ಐ.ನ ನೀತಿ ನಿಯಮಗಳನ್ನು ಅನುಸರಿಸಿ ಇನ್ನೂ ಹೆಚ್ಚಿನ ಬ್ಯಾಂಕಗಳನ್ನು ಕಟ್ಟೋಣ, ಪಟ್ಟಣ ಸಹಕಾರಿ ಬ್ಯಾಂಕಗಳು ಮಾದರಿ ಸಹಕಾರಿ ಬ್ಯಾಂಕಗಳಾಗಬೇಕು. ಇದಕ್ಕೆ ಬೇಕಾದ ಸಹಾಯ ಸಹಕಾರವನ್ನು ಸಂಯುಕ್ತ ಸಹಕಾರಿ ಯಾವುತ್ತೂ ನೀಡುತ್ತದೆ." ಎಂದು ಹೇಳಿದರು.

ದಿನಾಂಕ : 29.1.2014ರ ತರಬೇತಿ ಕಾರ್ಯ ಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ಆರ್ ರವಿಂದ್ರನಾಥ ಇವರು ತಮ್ಮ ಉಪನ್ಯಾಸದಲ್ಲಿ "ರಿಸರ್ವ ಬ್ಯಾಂಕಿನ ಸೂಚನೆ ಪ್ರಕಾರ ಪ್ರತಿ ಮಾಹೆ ಆಡಳಿತ ಮಂಡಳಿಯ ವಿಷಯಗಳು" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಮಧ್ಯಾಹ್ನದ ಶ್ರೀಮತಿ ಸತ್ಯವಾಣಿ, ಆರ್.ಬಿ.ಐ ಅಧಿಕಾರಿಗಳು, ಹೈದ್ರಾಬಾದ ಇವರು "ಕ್ಯಾಮಲ್ ರೇಟಿಂಗ್" ವಿಷಯದ ಕುರಿತು ಉಪನ್ಯಾಸ ನೀಡಿದರು.

ದಿನಾಂಕ 30.01.2014ರ ತರಬೇತಿಯಲ್ಲಿ ಬೆಳಗ್ಗೆ 9.00 ರಿಂದ 11.00ರವರೆಗೆ "ಸಹಕಾರಿಗಳಿಗೆ ಅನ್ವಯವಾಗುವಂತೆ ವಿವಿಧ ತೆರಿಗೆ ಕಾಯ್ದೆಗಳು ಆದಾಯ ತೆರಿಗೆ ಕಾಯದೆ, 1961" ಎಂಬ ವಿಷಯಗಳ ಬಗ್ಗೆ ಶ್ರೀ ಬಿ.ವಿ.ರವೀಂದ್ರನಾಥರವರು ಉಪನ್ಯಾಸ ನೀಡಿದರು. ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಎಸ್.ಆರ್. ರಮಾನಂದ್‌ರವರು ಅಸೆಟ್ಸ್ ಆಂಡ್ ಲಯಾಲಿಬಿಟಿಸ್ ಮ್ಯಾನೇಜ್ ಮೆಂಟ್ ಎಂಬ ವಿಷಯದ ಬಗ್ಗೆ ಹಾಗೂ ಶ್ರೀ ಹೆಚ್.ಮುರಲಿಧರ್‌ರವರು "ರಿಕವರಿ ಮ್ಯಾನೇಜ್‌ಮೆಂಟ್" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಸಂಜೆ ತರಬೇತಿ ಕಾರ್ಯಕ್ರಮದ ಸಮಾ ರೋಪ ಕಾರ್ಯಕ್ರದಲ್ಲಿ ಶ್ರೀಯುತ ಗುರುನಾಥ ಜ್ಯಾಂತಿಕರ ಮಾನ್ಯ ಅಧ್ಯಕ್ಷರು ಸಂಯುಕ್ತ ಸಹಕಾರಿ ಬೆಂಗಳೂರು, ಶ್ರೀಯುತ ಶಾಂತಿನಾಥ ಪಂಡಿತ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು, ಶ್ರೀಯುತ ಶರಣಗೌಡ ಜಿ.ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು, ಶ್ರೀ ಹೆಚ್.ಮುರಲಿಧರ್ ಹಾಗೂ ಉಪ ಪ್ರಧಾನ ವ್ಯವಸ್ಥಾಪಕರು ಸಂಯುಕ್ತ ಸಹಕಾರಿ ಬೆಂಗಳೂರು ಇವರೆಲ್ಲರು ಉಪಸ್ಥಿತರಿದ್ದರು. ಸೂರ್ಯಕಾಂತ ರ‍್ಯಾಕಲೆ, ಅಧಿಕಾರಿಗಳು, ಸಂಯುಕ್ತ ಸಹಕಾರಿ ಬೆಳಗಾವಿ ವಿಭಾಗ ಇವರು ವಂದನಾರ್ಪಣೆ ಮಾಡಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 11 ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕಗಳಿಂದ 20 ಅಧಿಕಾರಿಗಳು ಭಾಗ ವಹಿಸಿದ್ದರು. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸಹ ಈ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.



– ಬಿ.ವಿ.ರವೀಂದ್ರನಾಥ್



ಹಿಂದಿನ ಸಂಚಿಕೆಯಿಂದ

# ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು : ಆದಾಯ ತೆರಿಗೆ ಕಾಯ್ದೆ, 1962

**ಪ್ರಕರಣ 194 ಎ: ಬಡ್ಡಿ :**

- ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಭದ್ರತಾಠೇವಣಿ ಹೊರತುಪಡಿಸಿದಂತೆ ಯಾವುದೇ ಗ್ರಾಹಕನು ತನ್ನಲ್ಲಿ ಇಟ್ಟಿರುವ ಠೇವಣಿಗಳ ಮೇಲೆ ನೀಡುವ ಬಡ್ಡಿಯು ಒಂದು ಆರ್ಥಿಕ ವರ್ಷದಲ್ಲಿ 5,000–00ರೂ.ಗಳಿಗೆ ಮೀರಿದಲ್ಲಿಅಂತಹ ಬಡ್ಡಿಯ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.
- ಯಾವುದೇ ಸಹಕಾರ ಸಂಸ್ಥೆಯ ಅರ್ಹ ಸದಸ್ಯನು ಆ ಸಹಕಾರ ಸಂಸ್ಥೆಯಲ್ಲಿ ತಾನು ಹೊಂದಿದಯಾವುದೇ ಠೇವಣಿಯ ಮೇಲೆ ಎಷ್ಟೇ ಮೊತ್ತದ ಬಡ್ಡಿ ಬಂದಿರಲಿ ಅದನ್ನು ಪ್ರಕರಣ 194ಎ ಅಡಿಯಲ್ಲಿ ಆದಾಯ ತೆರಿಗೆ ಕಡಿತವಿಲ್ಲದೆಸ್ವೀಕರಿಸಲು ಅರ್ಹನಾಗಿರುತ್ತಾನೆ.
- ಸದಸ್ಯನಲ್ಲದ ಠೇವಣಿದಾರನು ಸೂಕ್ತ ನಮೂನೆಗಳಲ್ಲಿ ಘೋಷಣೆಗಳನ್ನು ಸಲ್ಲಿಸಿದಲ್ಲಿ ತಾನು ಹೊಂದಿದ ಠೇವಣಿಗಳ ಮೇಲೆ ಎಷ್ಟೇ ಮೊತ್ತದ ಬಡ್ಡಿ ಬಂದಿರಲಿ ಅದನ್ನು ಪ್ರಕರಣ 194(ಎ) ರಡಿಯಲ್ಲಿ ಆದಾಯ ತೆರಿಗೆ ಕಡಿತವಿಲ್ಲದೆ ಸ್ವೀಕರಿಸಲು ಅರ್ಹನಾಗಿರುತ್ತಾನೆ.

✔ 15G ಹಿರಿಯ ನಾಗರೀಕರನ್ನು ಹೊರತುಪಡಿಸಿಇತರರು

✔ 15H ಹಿರಿಯ ನಾಗರೀಕರು( 65 ವರ್ಷಗಳಿಗೆ ಮೇಲ್ಪಟ್ಟವರು)

**ಪ್ರಕರಣ 194 ಸಿ: ಗುತ್ತಿಗೆ :**

- ಸಹಕಾರ ಸಂಸ್ಥೆಯು ಕಾರ್ಮಿಕ ಗುತ್ತಿಗೆ ಸಹಿತ ಯಾವುದೇ ಕಾಮಾಗಾರಿ ಒಪ್ಪಂದದನ್ವಯ ಗುತ್ತಿಗೆದಾರನಿಗೆ ಒಮ್ಮೆ 30,000 ರೂ.ಗಳಿಗೆ ಒಂದು ವರ್ಷದಲ್ಲಿ 75,000ರೂ.ಗಳಿಗೆ ಮೀರಿ ಹಣ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

**ಪ್ರಕರಣ 194 ಹೆಚ್ : ಕಮೀಷನ್/ಯಾದಲ್ಲಾಳಿಶುಲ್ಕ :**

- ಸಹಕಾರ ಸಂಸ್ಥೆಯು 5,000 ರೂ.ಗಳಿಗೆ ಮೀರಿ ಕಮೀಷನ್ ದಲ್ಲಾಳಿ ಶುಲ್ಕ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇಕಡಿತಮಾಡಿ ನೀಡತಕ್ಕದ್ದು.
- ಸಹಕಾರಿಯಿಂದ ಪಡೆಯುವ ಕಮೀಷನ್ ವಾರ್ಷಿಕ 5,000 ರೂಗಳಿಗೆ ಮೀರಿದ್ದಲ್ಲಿ ಮತ್ತು ಅಂತಹವರ ವಾರ್ಷಿಕ ತೆರಿಗೆದಾಯಕ ಆದಾಯವು ತೆರಿಗೆಯ ಮಿತಿಗಿಂತ ಕಡಿಮೆ ಇದ್ದಲ್ಲಿ ಸಂಬಂಧಿಸಿದ ಆದಾಯ ತೆರಿಗೆ ಅಧಿಕಾರಿಗಳಿಗೆ ನಮೂನೆ 13ರಲ್ಲಿ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದಲ್ಲಿ ಅಂತಹವರಿಗೆ ಮೂಲದಲ್ಲಿ ತೆರಿಗೆ ಕಡಿತ ಮಾಡದೆ ಕಮೀಷನ್ ಪಾವತಿಸಬಹುದಾಗಿರುತ್ತದೆ.

**ಪ್ರಕರಣ 194 ಐ : ಬಾಡಿಗೆ :**

- ಸಹಕಾರ ಸಂಸ್ಥೆಯು ವಾರ್ಷಿಕ 1,80,000–00 ರೂಗಳಿಗೆ ಮೀರಿ ಬಾಡಿಗೆ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು. ಇಲ್ಲಿ ಬಾಡಿಗೆ ಎಂದರೆ ಲೀಸ್ ಯಾವುದೇ ಒಪ್ಪಂದದ ಮೇರೆಗೆ ಯಾವುದೇ ಭೂಮಿಯಾ ಕಟ್ಟಡ (ಪೀಠೋಪಕರಣ, ಜೋಡಣೆಗಳ ಸಹಿತ/ರಹಿತ)ಗಳಉಪಯೋಗಕ್ಕಾಗಿ ನೀಡುವ ಹಣ.

**ಪ್ರಕರಣ 194 ಜೆ : ವೃತ್ತಿಪರಅಥವಾತಾಂತ್ರಿಕ ಸೇವೆಗಳ ಶುಲ್ಕ :**

- ಸಹಕಾರ ಸಂಸ್ಥೆಯು ಯಾವುದೇ ವ್ಯಕ್ತಿಗೆ ವಾರ್ಷಿಕ 30,000 ರೂ.ಗಳಿಗೆ ಮೀರಿ ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳ ಶುಲ್ಕ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

**18.ಪ್ರಕರಣ203J :**

- ಕಾಯ್ದೆಯ ಪ್ರಕಾರ ಮೂಲದಲ್ಲಿತೆರಿಗೆಕಡಿತ ಮಾಡುವ ಪ್ರತಿಯೊಂದು ಸಹಕಾರಿ ಸಂಸ್ಥೆಯು ಸೂಕ್ತ ಪ್ರಾಧಿಕಾರಕ್ಕೆ ನಮೂನೆ 49ಬಿ ನಲ್ಲಿ ಅರ್ಜಿ ಸಲ್ಲಿಸುವುದರ ಮೂಲಕ ತೆರಿಗೆ ಖಾತೆ ಸಂಖ್ಯೆಯನ್ನು (TAN) ಪಡೆಯ ತಕ್ಕದ್ದು ಮತ್ತು ಮೂಲದಲ್ಲಿ ಕಡಿತ ಮಾಡಿದ ತೆರಿಗೆ ಪಾವತಿಸುವ ಎಲ್ಲ ಚಲನ್‌ಗಳಲ್ಲಿ ಮತ್ತು ಎಲ್ಲಾ ಮೂಲದಲ್ಲಿ ತೆರಿಗೆ ಕಡಿತ ಮಾಡಿದ ಪ್ರಮಾಣ ಪತ್ರಗಳಲ್ಲಿ ಈ ಖಾಯಂ ನೋಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

**19.ಪ್ರಕರಣ200 : ತೆರಿಗೆ ಕಡಿತಮಾಡಿದವರ ಬಾಧ್ಯತೆಗಳು**

- ಮೇಲೆ ತಿಳಿಸಿದಂತೆ ಯಾವುದೇ ಬಾಬ್ತಿನಲ್ಲಿ ಮೂಲದಲ್ಲಿ ತೆರಿಗೆ ಕಡಿತಮಾಡಿದ ಸಹಕಾರಿ ಸಂಸ್ಥೆಯು ತೆರಿಗೆಯನ್ನು ಕಡಿತಮಾಡಿದ ತಿಂಗಳಿನ ಕೊನೆಯ ದಿನದಿಂದ ಏಳು ದಿನಗಳೊಳಗಾಗಿ ಕೇಂದ್ರ ಸರಕಾರಕ್ಕೆ ಜಮಾ ಮಾಡತಕ್ಕದ್ದು.
- ಕಡಿತಮಾಡಿ ಪಾವತಿಸಿದ ತೆರಿಗೆಯ ವಿವರಗಳನ್ನು ಮೂರು ತಿಂಗಳಿಗೊಮ್ಮೆಯಂತೆ ಸೂಕ್ತ ನಮೂನೆಯಲ್ಲಿ ದಾಖಲಿಸಿ ಸಂಬಂಧಿಸಿದ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸತಕ್ಕದ್ದು.
- ಕಡಿತ ಮಾಡಿದ ತೆರಿಗೆ ಪ್ರಮಾಣಪತ್ರವನ್ನು ನಮೂನೆ16ಎನಲ್ಲಿ ಸಂಬಂಧಿಸಿದ ವ್ಯಕ್ತಿಗೆ ನೀಡತಕ್ಕದ್ದು.

**20.ನೆನಪಿಡ ಬೇಕಾದ ಪ್ರಮುಖ ಅಂಶಗಳು :**

- ಶಾಶ್ವತ ನೋಂದಣಿ ಸಂಖ್ಯೆಯನ್ನು (PAN) ಪಡೆಯುವುದು
- ಅಗತ್ಯವಿದ್ದಲ್ಲಿ ತೆರಿಗೆ ಖಾತೆ ಸಂಖ್ಯೆಯನ್ನು (TAN) ಪಡೆಯುವುದು
- ಪ್ರತಿವರ್ಷ ವಾರ್ಷಿಕತೆರಿಗೆ ವರದಿಯನ್ನುತಪ್ಪದೇ ಸಲ್ಲಿಸುವುದು
- ಅನ್ವಯಿಸುವಲ್ಲಿ ಮೂಲದಲ್ಲಿತೆರಿಗೆಕಡಿತ ಮಾಡುವುದು
- 40(A), 269 (SS), 269(T) ಇವುಗಳನ್ನು ಗಮನದಲ್ಲಿರಿಸಿ ಕೊಂಡು ವ್ಯವಹರಿಸುವುದು.
- ಬೇರೆ ಬೇರೆ ವ್ಯವಹಾರಗಳಿದ್ದಲ್ಲಿ ಲೆಕ್ಕಪತ್ರಗಳನ್ನು ವಿಂಗಡಿಸಿ ನಿರ್ವಹಿಸುವುದು. ■

ಲೇಖನ

# ಸಹಕಾರ ಸಂಸ್ಥೆಗಳ ಸಾಮರ್ಥ್ಯ ವೃದ್ಧಿಗೆ 'ಸಂಪೂರ್ಣ ಗುಣಮಟ್ಟದ ಆಡಳಿತ'

ಸ್ವಾನಂದ ಕೆ.ಹೆಗಡೆ, ಯಲ್ಲಾಪುರ.

ಸಂಪೂರ್ಣ ಗುಣಮಟ್ಟದ ಆಡಳಿತ (Total Quality Management) ಎಂಬುದು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಾಮಾನ್ಯವಾಗಿ ಕೇಳಿಬರುವ ಯಶಸ್ಸಿನ ಮಂತ್ರವಾಗಿದೆ. TQM ಎಂದು ಜನಜನಿತವಾಗಿರುವ ಈ ಆಡಳಿತ ಪದ್ಧತಿಯನ್ನು ಪ್ರಮುಖ ಕೈಗಾರಿಕಾ ದೇಶಗಳಾದ ಅಮೇರಿಕಾ, ಜಪಾನ್ ಮತ್ತು ಕೆಲವು ಯೂರೋಪ್ ದೇಶಗಳು ಅಳವಡಿಸಿಕೊಂಡು ಅಭಿವೃದ್ಧಿ ಪಥದಲ್ಲಿ ಸಾಗಿವೆ. ಜಾಗತೀಕರಣ ಮತ್ತು ತಂತ್ರಜ್ಞಾನದ ತ್ವರಿತ ಅಭಿವೃದ್ಧಿಯ ಈ ಸಮಯದಲ್ಲಿ ಉಳಿದ ಅಭಿವೃದ್ಧಿ ಶೀಲ ರಾಷ್ಟ್ರಗಳು ಕೂಡ ಈ ಕುರಿತು ಹೆಚ್ಚಿನ ಗಮನವಹಿಸತೊಡಗಿವೆ.

**'ಗುಣಮಟ್ಟದ ಆಡಳಿತ'ದ ಅರ್ಥ :** ನಿರಂತರ ಸುಧಾರಣೆಯ ಒಂದು ಪ್ರಕ್ರಿಯೆಯ ಮೂಲಕ ವ್ಯವಹಾರದ ಎಲ್ಲಾ ವಿಭಾಗಗಳನ್ನು ಉತ್ತಮಗೊಳಿಸಿ ಉತ್ಕೃಷ್ಟ ಗ್ರಾಹಕ ಸೇವೆಗಳನ್ನು ಒದಗಿಸುವ ವಿಧಾನವೇ ಗುಣಮಟ್ಟದ ಆಡಳಿತ ಪ್ರಕ್ರಿಯೆ. ಇದು ಗ್ರಾಹಕರ ಸಂತೃಪ್ತಿಯನ್ನೇ ಗುರಿಯಾಗಿಸಿಕೊಂಡಿರುವ ಮತ್ತು ಅದನ್ನು ಕಡಿಮೆ ಖರ್ಚಿನಲ್ಲಿ ಸಾಧಿಸುವ ನಿಟ್ಟಿನಲ್ಲಿ ಸತತ ಪ್ರಯತ್ನ ಮಾಡುವ ವ್ಯವಸ್ಥೆಯಾಗಿದ್ದು, ಆ ಮೂಲಕ ಸಂಸ್ಥೆಯ ಅಭಿವೃದ್ಧಿ ಸಾಧಿಸುವ ವಿಧಾನವಾಗಿದೆ.

**ಬೆಳೆದು ಬಂದ ಬಗೆ :** ಗುಣಮಟ್ಟದ ಆಡಳಿತ ಎಂಬ ವ್ಯವಸ್ಥೆಯು ಅಮೇರಿಕಾದಲ್ಲಿ 1920ರ ಸಮೀಪದಲ್ಲೇ ಕಂಡುಹಿಡಿಯಲ್ಪಟ್ಟಿದ್ದರೂ ಕೈಗಾರೀಕರಣ ಮತ್ತು ಜಾಗತೀಕರಣದ ಈ ಸಂದರ್ಭದಲ್ಲಿ ಹೆಚ್ಚಿನ ಹೊಳಪು ಕಂಡುಕೊಳ್ಳುತ್ತಿದೆ.

ಆ ಸಮಯದಲ್ಲಿ ಇದು ಕೇವಲ ಉತ್ಪಾದನೆಯ ವಿವಿಧ ಹಂತಗಳಲ್ಲಿ ಗುಣಮಟ್ಟ ಕಾಪಾಡುವಲ್ಲಿ ಮಾತ್ರ ಬಳಕೆಯಾಗುತ್ತಿತ್ತು. ನಂತರದ ದಿನಗಳಲ್ಲಿ 'ಡೇಮಿಂಗ್' ಎನ್ನುವವರು ಇದರ ವಿವಿಧ ಅನ್ವಯಿಕಗಳನ್ನು ಕಂಡುಹಿಡಿದರು. ಆದ್ದರಿಂದ ಇವರನ್ನು ಟಿಕ್ಯೂಎಮ್ ಜನಕ ಎಂದು ಕರೆಯುತ್ತಾರೆ. ಇವತ್ತು ಇದನ್ನು ಎಲ್ಲಾ ವಿಭಾಗಗಳಲ್ಲಿ ಬಳಸಲಾಗುತ್ತಿದೆ.

ಸಹಕಾರ ರಂಗದಲ್ಲಿ 'ಗುಣಮಟ್ಟದ ಆಡಳಿತ'ದ ಅವಶ್ಯಕತೆ; ಸಹಕಾರ ಕ್ಷೇತ್ರವು ಸದಸ್ಯರ ಮತ್ತು ಸಮಾಜದ ಅಭಿವೃದ್ಧಿಯನ್ನೇ ಧ್ಯೇಯವಾಗಿರಿಸಿಕೊಂಡಿರುವ ಸಂಸ್ಥೆಗಳ ಒಕ್ಕೂಟವಾಗಿದೆ. ಈ ಧ್ಯೇಯ ಸಾಧನೆಗೆ ಆಂತರಿಕ ಆಡಳಿತದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಮತ್ತು ಸಂಸ್ಥೆಯನ್ನು ನಿರಂತರ ಅಭಿವೃದ್ಧಿಯತ್ತ ಕೊಂಡೊಯ್ಯುವುದು ಅತ್ಯಗತ್ಯವಾಗಿದೆ. ಹಾಗಾಗಿ ಗುಣಮಟ್ಟದ ಆಡಳಿತದ ಜಾರಿ ಸಹಕಾರ ರಂಗದಲ್ಲಿ ಕೂಡ ಅವಶ್ಯವಾಗಿದೆ.

**TQMನ ಪ್ರಮುಖ ಅಂಶಗಳು :**

- **ಗ್ರಾಹಕರ (ಸದಸ್ಯರ) ಸಂತೃಪ್ತಿಯ ಬಗ್ಗೆ ನಿರಂತರ ಕಾಳಜಿ :** ಲೀ ಲಾಕೊಲಾ ಅವರು ಹೇಳುವಂತೆ ಯಶಸ್ಸಿನ ಮೂರು ಮೂಲ ಮಂತ್ರಗಳೆಂದರೆ ಗ್ರಾಹಕರ ಸಂತೃಪ್ತಿ, ಗ್ರಾಹಕರ ಸಂತೃಪ್ತಿ ಮತ್ತು ಗ್ರಾಹಕರ ಸಂತೃಪ್ತಿ. ಈಗಿನ ಪ್ರತಿಯೊಂದು ಸಂಸ್ಥೆಯ ಬೆಳವಣಿಗೆ, ಯಶಸ್ಸು – ಅದು ನಿಡುವ ಗ್ರಾಹಕ ಸೇವೆಗಳು ಮತ್ತು ಅವುಗಳ ಗುಣಮಟ್ಟದ ಮೇಲೆ ಅವಲಂಬಿತವಾಗಿದೆ. ಸಹಕಾರ ಸಂಘಗಳು ಕೂಡ ತಮ್ಮ ಸದಸ್ಯರಿಗೆ ನೀಡುವ ಸೇವೆಗಳ ಗುಣಮಟ್ಟವನ್ನು ನಿರಂತರ ಅಭಿವೃದ್ಧಿಗೊಳಿಸುವಲ್ಲಿ ಶ್ರಮಿಸಿದರೆ ಯಶಸ್ಸು ಸಾಧ್ಯ.
- **ನ್ಯೂನ್ಯತೆಗಳ ಪತ್ತೆ ಮತ್ತು ನಿವಾರಣೆ :** ಗುಣಮಟ್ಟದ ಆಡಳಿತ ವ್ಯವಸ್ಥೆಯು ತಪ್ಪುಗಳ ಕಂಡುಹಿಡಿಯುವಿಕೆ ಮತ್ತು ಅದರ ನಿವಾರಣೆ ಮಾಡುವುದಕ್ಕಿಂತ ತಪ್ಪುಗಳಾಗದಂತೆ ತಡೆಯುವಿಕೆಯೆಡೆಗೆ ಹೆಚ್ಚಿನ ಗಮನ ಹರಿಸುತ್ತದೆ. ನ್ಯೂನ್ಯತೆಗಳು ಕಂಡುಬಂದ ತಕ್ಷಣ ಅದರ ನಿವಾರಣೆಗೆ ಪ್ರಯತ್ನಿಸುವುದು ಇದರ ಪ್ರಮುಖ ಲಕ್ಷಣ.
- **ನಿರಂತರ ಕಲಿಕೆ ಮತ್ತು ಸುಧಾರಣೆ :** ಗುಣಮಟ್ಟದ ಆಡಳಿತ ವ್ಯವಸ್ಥೆಯನ್ನು ಇತರ ಆಡಳಿತ ವ್ಯವಸ್ಥೆಗಳಿಗಿಂತ ಭಿನ್ನವಾಗಿಸಿರುವುದು ಅದರ ನಿರಂತರ ಕಲಿಕೆ ಮತ್ತು ಸುಧಾರಣೆಯ ಈ ಅಂಶವಾಗಿದೆ, ಪ್ರತಿಯೊಂದು ಸಂಸ್ಥೆಯು ತನ್ನ ತಪ್ಪುಗಳನ್ನು ತಿದ್ದಿಕೊಳ್ಳುತ್ತ, ತನ್ನನ್ನು ತಾನು ಸುಧಾರಣೆ ಮಾಡಿಕೊಳ್ಳುತ್ತ ಮುಂದುವರಿಯಬೇಕು. ಆಗಲೇ ಆ ಸಂಸ್ಥೆಯು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲವಾಗುತ್ತದೆ.
- **ಸಿಬ್ಬಂದಿಗಳ ಸಂಪೂರ್ಣ ತೊಡಗುವಿಕೆ ಮತ್ತು ಅವರ ಅಭಿವೃದ್ಧಿ :** ಆಡಳಿತ ಸುಧಾರಣೆಯು ಕೇವಲ ಉನ್ನತ ಮಟ್ಟದ ನಿರ್ದೇಶಕರುಗಳ ಅಥವಾ ವ್ಯವಸ್ಥಾಪಕರ ಕಾರ್ಯ ಮಾತ್ರವಲ್ಲ. ಉನ್ನತ ಮಟ್ಟದಲ್ಲಿ ಕೈಗೊಂಡ ನಿರ್ಧಾರಗಳ ಸಫಲತೆಯು ಅವುಗಳ ಜಾರಿಗೊಳಿಸುವಿಕೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಗುಣಮಟ್ಟದ ಆಡಳಿತ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಸಿಬ್ಬಂದಿಗಳ ಸಂಪೂರ್ಣ ಸಹಕಾರ ಮತ್ತು ಅವರ ಸಂಪೂರ್ಣ ಒಳಗೊಳ್ಳುವಿಕೆಯು ಮುಖ್ಯವಾಗಿರುತ್ತದೆ. ಸಿಬ್ಬಂದಿಗಳ ವೈಯಕ್ತಿಕ ಅಭಿವೃದ್ಧಿಯೆಡೆಗೂ ಗಮನ ಹರಿಸುವುದನ್ನು ಇದು ಒಳಗೊಂಡಿದೆ.
- **ನಿರಂತರ ಗುಣಮಟ್ಟವನ್ನು ಕಾಯ್ದುಕೊಳ್ಳುವುದು :** TQM ಎಂಬುದು ಒಂದು ಸಲದ ಕಾರ್ಯವಲ್ಲ. ಅದು ನಿರಂತರ ಪ್ರಕ್ರಿಯೆ. ನಿರಂತರ ಗುಣಮಟ್ಟ ಕಾಯ್ದುಕೊಂಡ ಸಂಸ್ಥೆಯು ತನ್ನ ಸದಸ್ಯರಲ್ಲಿ ಅದರ ಬಗೆಗಿನ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ ಮತ್ತು ಬಹುಕಾಲ ಯಶಸ್ಸನ್ನು ಹೊಂದಿರುತ್ತದೆ.

ಒಂದು ಸಂಸ್ಥೆಯು ಅದರ ಉನ್ನತ ವಿಭಾಗದಲ್ಲಿರುವ ಅಧಿಕಾರಿಗಳ ಆದರ್ಶ ಮತ್ತು ಉದ್ದೇಶಗಳನ್ನು ಪ್ರತಿಬಿಂಬಿಸುವಂತಿರುತ್ತದೆ. ಅದರ ಯಶಸ್ಸು, ಅಲ್ಲಿನ ಆಡಳಿತ ವ್ಯವಸ್ಥೆ, ಸಿಬ್ಬಂದಿ ಸಮೂಹ ಮತ್ತು ಅದು ಗ್ರಾಹಕ(ಸದಸ್ಯ)ರಿಗೆ ನಿಡುವ ಪ್ರಾಮುಖ್ಯತೆಯನ್ನು ನೇರವಾಗಿ ಅವಲಂಬಿಸಿರುತ್ತದೆ. ಇದು ಸಹಕಾರ, ಕೈಗಾರಿಕೆ ಅಥವಾ ಉಳಿದ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಸಂಪೂರ್ಣ ಗುಣಮಟ್ಟದ ಆಡಳಿತ ಎಂಬ ವ್ಯವಸ್ಥೆಯು ಇವೆಲ್ಲವನ್ನು ಒಳಗೊಂಡಿದ್ದು ಸಂಸ್ಥೆಯನ್ನು ಯಶಸ್ಸಿನತ್ತ ಕೊಂಡೊಯ್ಯುವಲ್ಲಿ ಸಹಕಾರಿಯಾಗಿದೆ. ■

# ಬ್ಯಾಂಕಿಂಗ್ ಕ್ಷೇತ್ರದ ಜ್ಞಾನ ವಿಸ್ತಾರಕ್ಕಾಗಿ ಒಂದು ವೆಬ್‌ತಾಣ

http://bankingonly.com/

ರಘುನಂದನ ಕೆ.
ಕ.ರಾ.ಸ.ಸಂ.ಸ.ಸ., ಬೆಂಗಳೂರು.

ಭಾರತದ ಬ್ಯಾಂಕಿಂಗ್ ಕ್ಷೇತ್ರದ ವಿಸ್ತಾರ ಅಗಾಧವಾದದ್ದು. ದಿನೇ ದಿನೇ ಬದಲಾಗುತ್ತಿರುವ ಆರ್ಥಿಕ ಹಾಗೂ ಹಣಕಾಸು ಪರಿಸ್ಥಿತಿಗಳಿಂದ ಬ್ಯಾಂಕಿಂಗ್ ವಲಯದಲ್ಲೂ ಬದಲಾವಣೆಗಳು ಅನಿವಾರ್ಯವಾಗುತ್ತಿವೆ. ಬದಲಾವಣೆಗೆ ವೇಗವಾಗಿ ತೆರೆದುಕೊಳ್ಳದ ಹಣಕಾಸು ಸಂಸ್ಥೆಗಳು ವಿಫಲತೆಯತ್ತ ಸಾಗುವಂತಹ ಸ್ಪರ್ಧಾತ್ಮಕ ಯುಗದಲ್ಲಿ ನಾವಿದ್ದೇವೆ. ಬ್ಯಾಂಕಿಂಗ್ ಯಾ ಹಣಕಾಸು ಕ್ಷೇತ್ರದ ವಿಷಯಗಳು ನಮ್ಮನ್ನು ಹೇಗೆ ಬಾಧಿಸುತ್ತವೆ, ನಮ್ಮ ಗ್ರಾಹಕರು ಹಾಗೂ ನಮ್ಮ ಸೇವಾ ಕ್ಷೇತ್ರವೇ ಬೇರೆ ಎಂದು ಸಹಕಾರ ಸಂಸ್ಥೆಗಳಾಗಲಿ ಅಥವಾ ಯಾವುದೇ ಹಣಕಾಸು ವ್ಯವಹಾರ ನಡೆಸುವ ಸಂಸ್ಥೆಗಳಾಗಲಿ ಹೇಳುವಂತಿಲ್ಲ. ಪ್ರಪಂಚದ ಯಾವುದೋ ಮೂಲೆಯಲ್ಲಿನ ಸಣ್ಣ ಕದಲಿಕೆ ಸಂಪೂರ್ಣ ಆರ್ಥಿಕ ವ್ಯವಸ್ಥೆಯನ್ನೇ ಅಲುಗಾಡಿಸಬಹುದಾದ ಜಾಗತಿಕ ಗ್ರಾಮ (ಗ್ಲೋಬಲ್ ವಿಲೇಜ್) ವ್ಯವಸ್ಥೆಯಲ್ಲಿ ನಮ್ಮ ವ್ಯವಹಾರಗಳು ನಡೆಯುತ್ತಿವೆ.

ಇಂತಹ ಸಂದರ್ಭದಲ್ಲಿ, ಬ್ಯಾಂಕಿಂಗ್ ಕ್ಷೇತ್ರದ ಬಗ್ಗೆ ಪ್ರಮುಖ ಮಾಹಿತಿಗಳನ್ನ ಒಂದೇ ಕಡೆ ಪಡೆಯಬಹುದಾದ ಮಾಹಿತಿ ಕೇಂದ್ರವೊಂದರ ಅವಶ್ಯಕತೆ ಸಹಜ. ಮಾಹಿತಿ ತಂತ್ರಜ್ಞಾನದ ಬಹು ಮುಖ್ಯ ಕೊಡುಗೆಯಾದ ಅಂತರ್ಜಾಲ ಮಾಧ್ಯಮ ಈ ವಿಷಯದಲ್ಲಿ ನಮಗೆ ಸಹಾಯಕವಾಗುತ್ತದೆ. ಸಮಗ್ರ ಬ್ಯಾಂಕಿಂಗ್ ಮಾಹಿತಿ ಕೇಂದ್ರವಾಗಿ, ಅಂತರ್ಜಾಲದಲ್ಲಿ ಈ ಕೆಳಗಿನ ವೆಬ್‌ತಾಣವನ್ನು ನೋಡಬಹುದು.

**ವೆಬ್‌ತಾಣ 18 : http://bankingonly.com/**

- ಯಾವ ಬ್ಯಾಂಕ್‌ನಲ್ಲಿ ಸಾಲ ಹಾಗೂ ಠೇವಣಿ ಯಾವ ಬಡ್ಡಿ ದರದಲ್ಲಿ ದೊರೆಯುತ್ತದೆ, ವಿವಿಧ ಬ್ಯಾಂಕ್‌ಗಳಲ್ಲಿನ ಉಳಿತಾಯ ಖಾತೆಯ ದರಗಳು, ಚಿನ್ನದ ನಾಣ್ಯಗಳ ದರಗಳ ತುಲನಾತ್ಮಕ ಪಟ್ಟಿಯನ್ನು ಗ್ರಾಹಕರು ಇಲ್ಲಿ ನೋಡಬಹುದು.
- ಆರ್‌ಬಿಐನ ಇತ್ತೀಚಿಗಿನ ಪ್ರಮುಖ ಸುತ್ತೋಲೆಗಳು, ಐತಿಹಾಸಿಕ ಎನಿಸುವಂತಹ ಆರ್‌ಬಿಐನ ಹಣಕಾಸು ನೀತಿ ಹಾಗೂ ಸುತ್ತೋಲೆಗಳು, ಇದುವರೆಗಿನ ಸಿಆರ್‌ಆರ್, ಎಸ್‌ಎಲ್‌ಆರ್ ಹಾಗೂ ರೆಪೋದರಗಳು, ಈ ದರಗಳ ಬದಲಾವಣೆಗಳು, ವಿದೇಶಿ ವಿನಿಮಯ ದರಗಳ ಪಟ್ಟಿ ಇತ್ಯಾದಿಗಳನ್ನು ಈ ತಾಣದಲ್ಲಿ ನೋಡಬಹುದು.
- ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಸಾಹಿತ್ಯ, ಬ್ಯಾಂಕಿಂಗ್ ನೌಕರರ ತುಟ್ಟಿಬತ್ಯೆಯ ವಿವರಗಳು, ಬ್ಯಾಂಕಿಂಗ್ ಕ್ಷೇತ್ರದ ಅಂಕಿ ಅಂಶಗಳು, ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಉದ್ಯೋಗದ ಅಂಕಿಅಂಶಗಳು, ಅವಕಾಶಗಳ ಮಾಹಿತಿ ಇತ್ಯಾದಿಗಳನ್ನು ಈ ತಾಣದಲ್ಲಿ ಪಡೆಯಬಹುದು.
- ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದ ಸಾಮಾನ್ಯ ಜ್ಞಾನದ ಮಾಹಿತಿ, ವಿವಿಧ ಯೋಜನಾ ವರದಿಗಳು, ವಿವಿಧ ಬ್ಯಾಂಕುಗಳ ಶಾಖೆ ಹಾಗೂ ಎಟಿಎಂ ಕೇಂದ್ರಗಳ ಗುರುತಿಸುವ ಅವಕಾಶ ಈ ತಾಣದಲ್ಲಿ ದೊರೆಯುತ್ತದೆ.
- ಜಾಗತಿಕ ಬ್ಯಾಂಕಿಂಗ್ ಕ್ಷೇತ್ರದ ಮಾಹಿತಿ, ವಿಶ್ವದ ಹಾಗೂ ಭಾರತದ ಪ್ರಮುಖ ಬ್ಯಾಂಕುಗಳ ವೆಬ್‌ತಾಣದ ಮಾಹಿತಿ, ಭಾರತದ ಅನೇಕ ಬ್ಯಾಂಕುಗಳ ಸಂಪರ್ಕ ವಿವರಗಳು ಹಾಗೂ ಸಹಾಯವಾಣಿ, ಹಲವು ಬ್ಯಾಂಕುಗಳ ಸಂಕ್ಷಿಪ್ತ ಚಿತ್ರಣವನ್ನು ಕೂಡ ಈ ತಾಣದಲ್ಲಿ ನೋಡಬಹುದು.
- ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು, ಸುದ್ದಿ ಸಮಾಚಾರಗಳು, ತಜ್ಞರ ವಿಶ್ಲೇಷಣೆಗಳನ್ನು ಈ ತಾಣದಲ್ಲಿ ಕಾಣಬಹುದು. ಯಾವುದೇ ಲೇಖನ ಹಾಗೂ ಸುದ್ದಿ ಸಮಾಚಾರಗಳನ್ನು ಈ ತಾಣದಲ್ಲಿ ಲಾಗಿನ್ ಆಗುವ ಮೂಲಕ ನಾವು ಕೂಡ ಕಳುಹಿಸುವ ಸಾಧ್ಯತೆಯು ಕೂಡ ಈ ತಾಣದಲ್ಲಿದೆ.

ಈ ತಾಣದ ಹಿನ್ನಲೆ, ಈ ತಾಣದ ನಿರ್ವಹಣೆಕಾರರ ಮಾಹಿತಿ, ವೆಬ್‌ತಾಣದ ಐತಿಹಾಸಿಕ ಹಿನ್ನಲೆ, ಉದ್ದೇಶಗಳ ವಿವರ ಈ ತಾಣದಲ್ಲಿಲ್ಲ. ಆದರೆ ಅನೇಕ ವಿಷಯಗಳ ಮಾಹಿತಿ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿರುವ ಈ ತಾಣ ಏಕಕಾಲದಲ್ಲಿ ವಿವಿಧ ಬ್ಯಾಂಕುಗಳ ಸಾಲ ಹಾಗೂ ಠೇವಣಿಗಳ ಬಡ್ಡಿದರದ ತುಲನಾತ್ಮಕ ಅಂಶಗಳಂತಹ ಗ್ರಾಹಕ ಕೇಂದ್ರಿತ ಮಾಹಿತಿಯನ್ನ ಗ್ರಾಹಕರಿಗೆ, ಆರ್‌ಬಿಐನ ಐತಿಹಾಸಿಕ ಹಣಕಾಸು ನೀತಿಗಳು, ಸುತ್ತೋಲೆಗಳು, ಜಾಗತಿಕ ಬ್ಯಾಂಕಿಂಗ್ ಮಾಹಿತಿಗಳನ್ನು ಹಣಕಾಸು ಯಾ ಬ್ಯಾಂಕಿಂಗ್ ಸಂಸ್ಥೆ/ತಜ್ಞರಿಗೆ, ಬ್ಯಾಂಕಿಂಗ್ ಅಂಕಿ ಅಂಗಳು, ಲೇಖನಗಳು ಸೇರಿದಂತೆ ಕಲಿಕಾ ವಿಷಯಗಳನ್ನು ಹಣಕಾಸು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ಬ್ಯಾಂಕಿಂಗ್ ಮಾಹಿತಿಗಾಗಿ ಅನೇಕ ವೆಬ್‌ತಾಣಗಳನ್ನು ಹುಡುಕುವ ಮೊದಲು ಈ ವೆಬ್‌ತಾಣವನ್ನೊಮ್ಮೆ ನೋಡಿದಲ್ಲಿ ವಿಷಯ ಸಂಗ್ರಹ ಸುಲಭವಾದೀತು.

* * *

ಲೇಖನ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

## ಆಹಾ ನೀರು  ಎಷ್ಟು ಆಹ್ಲಾದಕರ !

ಪಂಚಮಹಾಭೂತಗಳಾದ  ಪೃಥ್ವಿ ಅಗ್ನಿ ವಾಯು ಜಲ  ಆಕಾಶ . ಈ ಭೂಮಿಯಲ್ಲಿ ನೀರಿಲ್ಲದಿದ್ದರೆ ಯಾವ ಜೀವ ಸಂಕುಲವಯ ಇರುತ್ತಿರಲಿಲ್ಲ ಅಲ್ಲವೇ. ನಮಗಾಗಿ ಪ್ರಕೃತಿ ನೀಡಿದ ವರಪ್ರಸಾದ. ಪ್ರಕೃತಿಯು ನಮಗೆ ಜೀವಿಸಲು ಬೇಕಾದಷ್ಟು ನೀರನ್ನು ನೀಡುತ್ತಿದೆ. ಆದರೆ ಈ ದುರಾಸೆಯ ಮಾನವ ಶುದ್ಧನೀರನ್ನು ಕಲುಷಿತಗೊಳಿಸಿ ಬಳಸಲು ಬರದಂತೆ ಮಾಡುತ್ತಿದ್ದಾನೆ . ಈ ಆಧುನಿಕತೆ ,ಯಶಾರಾಮಿ ಜೀವನ ಶೈಲಿ ಹಾಗೂ ಅಧಿಕ ಉತ್ಪಾದಿಸುವ ಆಸೆಯಲ್ಲಿ ನೀರಿನ ಎಲ್ಲಾ ಮೂಲಗಳನ್ನು ಕಲುಷಿತಗೊಳಿಸುತ್ತಿದ್ದಾನೆ ಈದುರಾಸೆ ಮಾನವ.



ಬದುಕಿನ ಜೀವಾಲವಾದ ಕುಡಿಯುವ ನೀರು ವಿಷವಾಗುತ್ತಿದೆ. ಮತ್ತೆ ಅನಾರೋಗ್ಯಕ್ಕೆ ಆಮಂತ್ರನಕೊಟ್ಟು ಆಹ್ವಾನಿಸುತ್ತಿದ್ದೆವೆ. ಈಗ ಶುದ್ಧ ಕುಡಿಯುವ ನೀರನ್ನು ಎಲ್ಲರಿಗೂ ಪ್ರಪಂಚದಾದ್ಯಂತ  ಬಹುದೊಡ್ಡ ಸಮಸ್ಯೆಯಾಗಿದೆ. ಪ್ರಸ್ತುತ ದಿನಗಳಲ್ಲಿ ಶುದ್ಧ ನೀರಿನ ಸಮಸ್ಯೆಯಾಗಿರುವುದು ಸಾಮಾನ್ಯಜನರಿಗೆ ಕಲುಷಿತ ನೀರನ್ನೆ ಕುಡಿಯಬೇಕಿದೆ ಇಂದು ಬಾಟಲಿ ನೀರು ಭಾರಿ ಬೆಲೆಯೊಂದಿಗೆ ಹಣವಂತರ ಬದುಕಿನ ಪಾಲಾಗಿದೆ. ಕುಡಿಯುವ ಶುದ್ಧನೀರು ಮಾರಾಟದ ವಸ್ತುವಾಗಿದೆ.  ಆದರೆ ಕಲುಷಿತ ನೀರನ್ನೆ ಕುಡಿದು ಜಲಜನ್ಯ ಅನೇಕ ರೋಗಕ್ಕೆ ತುತ್ತಾಗುತ್ತಿದ್ದಾರೆ. ಹೀಗಿರುವಾಗ ಶುದ್ಧ ಕುಡಿಯುವ ನೀರು ಕೇವಲ ಹಣವಂತರಿಗಷ್ಟೆ ಲಭಿಸುವುದಾದರೆ  ನಮ್ಮ ವ್ಯವಸ್ಥೆಯನ್ನು ಕಲ್ಯಾಣ ರಾಜ್ಯ ವ್ಯವಸ್ಥೆ ಎಂದು ಹೇಳುವುದಾದರೂ ಹೇಗೆ ?

## ಕರ್ನಾಟಕ ಸೌಹಾರ್ದ ಸಹಕಾರಿ 1997 ಕಾಯ್ದೆ ಪುಸ್ತಕ

ಕರ್ನಾಟಕ ಸೌಹಾರ್ದ ಸಹಕಾರಿ 1997 ಕಾಯ್ದೆಯ 2013ರ ವರೆಗಿನ ತಿದ್ದುಪಡಿ ಮಾಡಿದ "ಕರ್ನಾಟಕ ಸೌಹಾರ್ದ ಸಹಕಾರಿ 1997 ಕಾಯ್ದೆ ಪುಸ್ತಕವು ಪ್ರಕಟಗೊಂಡಿದ್ದು, ಕೋರಿಯರ್, ಪೋಸ್ಟಲ್ ಮೂಲಕ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ನಿರ್ಮಾಣ ಭವನ, ಡಾ॥ ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು ಇಲ್ಲಿ ಪಡೆಯಬಹುದು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಪ್ರಕಟಣೆಗಳು ಈ ಕೆಳಗಿನಂತಿವೆ :

| **ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಮಾಹಿತಿ :** | **ರೂ.** |
|---|---|
| 1. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ (ಕನ್ನಡ) | 100/– |
| 2. ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 3. ಸೌಹಾರ್ದ ಪತ್ತಿನ ಸಹಕಾರಿ ಮಾದರಿ ಉಪವಿಧಿ | 20/– |
| 4. ಸೌಹಾರ್ದ ವಿವಿದೋದ್ದೇಶ ಸಹಕಾರಿ ಮಾದರಿ ಉಪವಿಧಿ | 20/– |
| 5. ಮಾದರಿ ಸಾಲದ & ಠೇವಣಿ ನಿಯಮಾವಳಿಗಳು | 20/– |
| 6. ನೌಕರರ ಮಾದರಿ ಸೇವಾ ನಿಯಮಾವಳಿಗಳು | 15/– |
| 7. ಸೌಹಾರ್ದ ಸಹಕಾರಿಗಳ ಮಾಹಿತಿ ಕೈಪಿಡಿ | 15/– |
| 8. ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 20/– |
| 9. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕೈಪಿಡಿ | 15/– |
| 10. ವಿಶಿಷ್ಟ ಸಹಕಾರಿಗಳ ಕೈಪಿಡಿ (ಕನ್ನಡ) | 30/– |
| 11. ವಿಶಿಷ್ಟ ಸಹಕಾರಿಗಳ ಕೈಪಿಡಿ (ಆಂಗ್ಲ) | 25/– |
| 12. ಸೌಹಾರ್ದ ಕ್ಷೇತ್ರದ ಕಿರು ಚಿತ್ರ ಸಿಡಿ (ಕನ್ನಡ & ಆಂಗ್ಲ) | 50/– |

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | |
|---|---|
| 1. ಶ್ರೀ ಗುರುನಾಥ ಜ್ಯಾಂತಿಕರ್, ಅಧ್ಯಕ್ಷರು | 8884466701 |
| 2. ಶ್ರೀ ಹೆಚ್.ವಿ. ರಾಜೀವ್, ಉಪಾಧ್ಯಕ್ಷರು | 8884466702 |
| 3. ಶ್ರೀ ಶರಣಗೌಡ ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು | 8884466703 |
| 4. ಉಪ ಪ್ರಧಾನ ವ್ಯವಸ್ಥಾಪಕರು | 8884466704 |
| 5. ಉಪ ಪ್ರಧಾನ ವ್ಯವಸ್ಥಾಪಕರು | 8884466705 |
| 6. ಸಹ ಪ್ರಧಾನ ವ್ಯವಸ್ಥಾಪಕರು (ಶ್ರೀಕಾಂತ್ ಬರುವೆ) | 8884466706 |
| 7. ಸಹ ಪ್ರಧಾನ ವ್ಯವಸ್ಥಾಪಕರು (ಬೆಂಗಳೂರು ವಿಭಾಗಾಧಿಕಾರಿ) (ರಘುನಂದನ್ ಕೆ.) | 8884466707 |
| 8. ಸಹ ಪ್ರಧಾನ ವ್ಯವಸ್ಥಾಪಕರು (ಶ್ರೀಮತಿ ಕೃತಿ ಜರ್ನಾಧನ್) | 8884466708 |
| 9. ಸಹ ಪ್ರಧಾನ ವ್ಯವಸ್ಥಾಪಕರು (ಶ್ರೀಮತಿ ಶೋಭ ಆರ್.) | 8884466709 |
| 10. ತರಬೇತಿ ಅಧಿಕಾರಿ (ವಿ.ಜೆ. ಕಾರಕೂನ) | 8884466710 |
| 11. ಬೆಳಗಾವಿ ವಿಭಾಗಾಧಿಕಾರಿ | 8884466711 |
| 12. ಗುಲ್ಬರ್ಗಾ ವಿಭಾಗಾಧಿಕಾರಿ | 8884466714 |
| 13. ಮೈಸೂರು ವಿಭಾಗಾಧಿಕಾರಿ | 8884466712 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್
ರಾಜಾಜಿನಗರ. ಬೆಂಗಳೂರು – 10.

web : www.souharda.coop, E-mail : souharda@souharda.coop,

**ದೂ.ಸಂ :** 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ. ಕಾರಕೂನ**

ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551.
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010